ಕೊರವಂಜಿ



Koravanji

ಮಾರ್ಚ್

೧೯೬೧

ಸಂಪಾದಕರು

ಶ್ರೀ|| ರಾ. ಶಿ.

ಬರಹಗಾರರು :

ಶ್ರೀ|| ಕುಮಾರ್

ಶ್ರೀ|| ರಾಮಿ

ಶ್ರೀ|| ಹಾ. ರಾ.

ಶ್ರೀ|| ದಾಶರಥಿ ದೀಕ್ಷಿತ್

ಶ್ರೀ|| ಅ. ರಾ. ಸೇ

ಶ್ರೀ|| ಜಂಡಾಕುಮಾರ್

ಶ್ರೀ|| ಡೂಸು

ಇತ್ಯಾದಿ, ಇತ್ಯಾದಿ.

ಬಿಡಿ ಪ್ರತಿ


For 3 way Beauty Treatment...
RAJA
SNOW
AMLA HAIR OIL, KASTURI SOAP
MANYAM & CO. BANGALORE MADRAS MADURAI BOMBAY

ಕೊರವಂಜಿ

ಸಂಪುಟ ೧೯ ಮಾರ್ಚಿ ೧೯೬೧ ಸಂಚಿಕೆ ೧೨

★ ಕುಹಕಿಡಿಗಳು ★

ಮೈಸೂರು ಕಾಂಗ್ರೆಸಿನೊಳಗಿನ ಬಿಕ್ಕಟ್ಟು ಪರಿಹಾರವಾಯ್ತು.
—ಗಾದೆ ಜ್ಞಾಪಕಕ್ಕೆ ಬಂತು ವಿವರಗಳನ್ನು ಓದಿದಾಗ
"ಆದೇ ಉಂಡೇನ್ ಕದ ತೆಗೀರಿ! ಇಲ್ಲದೆ ಇದ್ದರೆ ಮುಂದೆ ಏಕಾದಶಿ!!"

* * * * *

ರಾಣಿ ಎಲಿಜಬೆತ್‌ರವರು ಪತಿಸಮೇತ ಭಾರತಕ್ಕೆ ಭೇಟಿ ಇತ್ತಾಗ ಹಳೇ ಕಾಲದ ದುಭಾಷಿಗಳು "ನಮ್ಮನ್ನು ಆಳ್ತಾ ಇಲ್ಲೇ ಇದ್ದುಬಿಡಿ" ಎಂದು ಕೇಳಿದರೆಂಬುದು ಸುಳ್ಳಂತೆ!

* * * * *

ನೆರೆನಾಡು ತಾಯ್ನುಡಿಯಲ್ಲಿ ತಮಿಳುನಾಡು ಆಯಿತು, ಇಂಗ್ಲೀಷಿನಲ್ಲಿ Madras State ಆಗಿ ಉಳಿಯಿತು,
—ಅಂದಮೇಲೆ ತಾಯ್ನುಡಿಯಲ್ಲಿ ಕರ್ಣಾಟಕ ಆಗಿ ಇಂಗ್ಲೀಷಿನಲ್ಲಿ Mysore State ಆಗಬಹುದಲ್ಲಾ!!
ಆಗಲಾದರೂ ಜಟ್ಟಿಕಾಳಗ ನಿಲ್ಲುತ್ತೇನೋ?

* * * * *

ಆಕಾಶವಾಣಿಯ ವಿಚಾರವಾಗಿ ಪಾರ್ಲಿಮೆಂಟಿನಲ್ಲಿ ವಾದವಿವಾದಗಳಾದುವಲ್ಲಾ!! ಅನಂತರ ಅನೌಪಚಾರಿಕವಾಗಿ ಒಬ್ಬ ಸದಸ್ಯರು ಡಾ|| ಕೇಸ್ಕರ್ ಅವರನ್ನು ಟೀಕಿಸಿದರಂತೆ. ಡಾ|| ಕೇಸ್ಕರ್ ಅವರು "ನಿಮ್ಮ ಭಾಷಣವನ್ನೇ ಹೋದ ವರ್ಷ ಎಂಟುಸಾರಿ ಪ್ರಚಾರ ಮಾಡಿದೆವಲ್ಲಾ ಹಣ ಬೇರೇ ಕೊಟ್ಟೆವಲ್ಲಾ ಎಂದರಂತೆ.

"ಅದಕ್ಕೇ ನಾನು ಹೇಳ್ತಿರೋದು! ನನ್ನಂಥೋನ್ನ ಕರೆಸ್ತೀರಲ್ಲ! ಅಂದೇ ಟೀಕೆ ಮಾಡ್ತಿರೋದು! ಒಳ್ಳೆಯವರು ಯಾರೂ ಇರಲಿಲ್ಲವೇ?" ಎಂದು ಇನ್ನೂ ತೀವ್ರವಾಗಿ ಟೀಕಿಸಿದರಂತೆ.

(ದಿಲ್ಲಿಯ ಅಶರೀರವಾಣಿ)

* * * * *

ರೇಗ್ಹೋಗುತ್ತೋಡಿ ನನ್ಗಂಡನ್ ಕಂಡ್ರೆ; ನನ್ಹುಟ್ದಬ್ಬ ಮರೀತಾರೆ ವಯಸ್ಮಾತ್ರ ನೆನಪಿರುತ್ತೆ ಅಂತೊಬ್ಬಾಕೆ ಪಲುಕಿ ಬರೆದಿದ್ದಾಳೆ.

* * * * *

ಲುಮುಂಬಾ ಕೊಲೆಗಾರರ ವಿಚಾರಣೆ ಆಗಲೇಬೇಕು, (ವಿ. ಸಂ.) ಹೀಗೆ ಹೇಳೋರು ತಮ್ಮ ದೇಶದಲ್ಲಿ ನಡೆಸಿದ ರಾಜಕೀಯ ಕೊಲೆಗಳ ವಿಚಾರಣೆ ನಡೆಸುತ್ತಾರೆಯೇ ಎಂದು ಕ| ಮೊಬೂಟೋರವರು ಕೇಳಿಲ್ಲವಂತೆ!!

* * * * *

ಈಗ ಉತ್ತರದ ಗಡಿಯನ್ನು ಸುರಕ್ಷಿತವಾಗಿ ಕಾದಿದ್ದೇವೆ.

(ಲೋಕಸಭೆಯಲ್ಲಿ)

"ಹಾಗೇ ಕಾದಿರಿ ಇರೋಕಡೆ" ಅಂತ ಚಾ ಎನ್ ಲೈರವರು ಹೇಳಿಲ್ಲವಂತೆ.

* * * * *

ಕೇದಾರನಾಥಕ್ಕೆ ಹೋಗುವವರೆಲ್ಲಾ ಇನ್ನುಮೇಲೆ ಚೀಣೀವೀಸಾಗಳನ್ನು ಬೇಡಬೇಕಾಗುತ್ತದೆ ಎನ್ನುವುದು ಶುದ್ಧ ತಿಳಿಗೇಡಿತನ.

* * * *

ಲಾವೋಸಿನ ಸುದ್ದಿಗಳನ್ನೇಕೆ ಪ್ರಕಟಿಸುವುದಿಲ್ಲ ಎಂದು ನಮ್ಮ ಐದು ನಯೆಪೈಸೆ ಪತ್ರಿಕೆಯವನನ್ನು ಕೇಳಿದಾಗ, ಅವ "ಆ ರಾಜಕುಮಾರರ ಹೆಸರುಗಳನ್ನು ಸರಿಯಾಗಿ ಹೇಳಲು ಬರುವುದಿಲ್ಲ ಅದಕ್ಕೇ" ಅಂದ.

* * * *

ಅಧ್ಯಕ್ಷ ಕಸಾವುಬು ಮತ್ತು ಕ| ಮೊಬುಟೋ ಅವರು ಬೆಲ್ಜಿಯಂನ ಆಮ್ಸ್ಟರ್ಡಾಂ ನಗರದಲ್ಲಿ ಮನೆಗಳನ್ನು ಕೊಂಡಿದ್ದಾರೆಂಬುದು ಖಚಿತವಲ್ಲವಂತೆ.

* * * *

ವೈದ್ಯಾಧಿಕಾರಿಗಳು ಚಿಕ್ಕ ಡಾಕ್ಟರಮೇಲೆ ಸಿಕ್ಕಾಪಟ್ಟೆ ರೇಗಾಡುತ್ತಿದ್ದರು ಸಿವಿಲಿಯನ್ ಸ್ನೇಹಿತನೊಬ್ಬ "ಲೋ! ಹಾಗೆಲ್ಲಾ ರೇಗಾಡಿದರೆ ಬ್ಲಡ್ ಪ್ರೆಷರ್ ಹೆಚ್ಚಾಗುತ್ತೆ, ಸಮಾಧಾನ ತಂದುಕೋ" ಎಂದು ಬುದ್ಧಿ ಹೇಳಿದಾಗ, ಇನ್ನೂ ರೇಗುತ್ತಾ ವೈದ್ಯಾಧಿಕಾರಿಗಳು ಹೇಳಿದರು "ನನ್ನ ಬ್ಲಡ್ ಪ್ರೆಷರ್ ಹೆಚ್ಚಾಗದೇ ಇರಲಿ ಅಂತ ರೇಗಾಡ್ತೀನಿ ಆಗ ಸಿಕ್ಕಿ ಹಾಕಿಕೊಂಡೋರಿಗೆ ಬ್ಲಡ್ ಪ್ರೆಷರ್ ಏರುತ್ತೆ ಕಣೋ" ಎಂದು.

* * * *

ಇದು ಕೇಳಿದ್ದೀರಾ!

ವಿಲಾಯಿತ್ತಿಯಿಂದ ಡಾಕ್ಟರೇಟ್ ಪಡೆದು ಶಾಮಸುಂದರ್ ಹಿಂತಿರುಗಿದಾಗ ರೈಲ್ವೆ ನಿಲ್ದಾಣದಲ್ಲಿ ಏನೆಲ್ಲಾ ಜನರು ಎಷ್ಟೆಲ್ಲಾ ಹಾರಹಾಕಿ ಕೈ ಕುಲುಕಿ ಮೈ ತಬ್ಬಿ ಸ್ವಾಗತ ಬಯಸಿದರು. ಅವನ ಅತ್ತೆ ಮಾವಂದಿರೂ ಹಳ್ಳಿಯಿಂದ ಬಂದಿದ್ದರು. ಅವನ ಹೆಂಡತಿಯೂ ಬಂದಿದ್ದಳು. ಆದರೆ ಆಕೆ, ತಲೆ ತಗ್ಗಿಸಿ, ಒಮ್ಮೊಮ್ಮೆ ಕಣ್ಣಂಚಿನ ಬೆರಗು ಬೆರಗು ದೃಷ್ಟಿಯನ್ನು ತನ್ನ ಗಂಡನ ಕಡೆಗೆ ಹಾಯಿಸುತ್ತಿದ್ದಳು.

ಮೂರು ತಿಂಗಳಿಂದ ಶಾಮಸುಂದರ ವಿಲಾಯಿತ್ತಿಯ ಜೀವನದ ಪ್ರಾಯದ ಸೊಬಗನ್ನು ಹಳ್ಳಿಯ ಹೆಂಡತಿಗೆ ವಿವರಿಸುತ್ತಿದ್ದ. ಕಡೆಗೊಮ್ಮೆ "ಇವತ್ತೇ ಇಂಗ್ಲೀಷ್ ಸಿನಿಮಾಕ್ಕೆ ನೀನು ಬರಬೇಕು. ಮಾತು ಅರ್ಥವಾಗದೇ ಇದ್ದರೂ ಪರವಾಗಿಲ್ಲ ತಿಳಿದುಕೊಳ್ಳೋದು ಬಹಳ ಇದೆ," ಎಂದು ಜಲುಂಮಾಡಿ ಸಿನಿಮಾಕ್ಕೆ ಕರೆದುಕೊಂಡು ಹೋದ, ಊಟವಾದಮೇಲೆ ಎರಡನೇ ಆಟಕ್ಕೆ.

ಆ ರಾತ್ರಿ ಮಾರಿಲೀನ್ ಮನ್ರೋ, ಏನೂ ಅರಿಯದ ಗಂಧರ್ವನೊಬ್ಬನೊಡನೆ ನಟಿಸಿದ್ದಳು. ಬಾಯಿಗೆ ಬೀಗಹಾಕಿಕೊಂಡು ತಿರುಪತಿಯಾತ್ರೆಗೆ ಹೋಗುವ ಭಕ್ತರಂತೆ, ಅವರುಗಳು ಬಾಯಿಗೆ ಬಾಯಿ ಬೀಗಹಾಕಿಕೊಂಡೇ ನಟಿಸಿದ್ದರು. ಸಿನಿಮಾ ಮುಗಿಯಿತು.

ಮೋಟಾರಿನ ಬಾಗಿಲನ್ನು ತೆಗೆದು ಆಕೆಯೇ ಮೊದಲು ಕುಳಿತುಕೊಂಡಳು ಶಾಮಸುಂದರ ಆಕಡೆಯಿಂದ ಬಾಗಿಲ ತೆರೆದು ಮೋಟಾರಲ್ಲಿ ಕೂತು ಹೊರಟ. ಸ್ವಲ್ಪದೂರ ಹೋದಾಗ "ಚೆನ್ನಾಗಿತ್ತೇ ಸಿನಿಮಾ! ಕಥೆ ಅರ್ಥವಾಯ್ತೇ" ಎಂದು ಶಾಮಸುಂದರ ಕೇಳಿದ. ಮುಂದೆ ಅವನ ಬಾಯಿಂದ ಮಾತೇ ಹೊರಡಲಿಲ್ಲ.

Halt & Proceed ಬೋರ್ಡನ್ನು ಮೋಟಾರು ಗುದ್ದಿತ್ತು. ನಿಂತುಕೊಂಡಿತು. ಸುಧಾರಿಸಿಕೊಂಡು ತುಟಿ ಒರೆಸಿಕೊಂಡು, ಶಾಮಸುಂದರ ಮೋಟಾರನ್ನು ತಿರುಗಿ "ಸ್ಟಾರ್ಟ್"ಮಾಡಿ ಮನೆಗೆ ಹೋದ.

ಹಳ್ಳಿ ಹುಡುಗಿಯರು ಯಾವ ಸಿನಿಮಾ ತಾರೆಗಳಿಂದಲೂ ಏನು ಪಾಠವನ್ನು ಕಲಿಯಬೇಕಾಗಿಲ್ಲ ಎಂಬ ಸತ್ಯವನ್ನು ಅರಿತಿದ್ದ; ಶಾಮಸುಂದರ.

* * * *

ಕಣ್ಣುಕಟ್ಟಿಕೊಂಡು ಕೂತಿದ್ದ ಗಾಂಧಾರಿ ದೇವಿಯನ್ನು ಧೃತರಾಷ್ಟ್ರ ಮಹಾರಾಜ ಒಮ್ಮೆ ಕೇಳಿದ "ದೇವೀ! ಯಾಕೋ ನಾಲಿಗೆ ಮುಲು ಮುಲು ಗುಟ್ಟುತಾ ಇದೆ. ಹಸ್ತಿನಾಪುರದ ಏಳನೇ ದೊಡ್ಡ ಬೀದಿ, ಹನ್ನೊಂದನೇ ಅಡ್ಡ ಬೀದೀಲಿ

ಅಡುಗೂಲಜ್ಜಿ ಒಬ್ಬಳು ಹುರಿಗಾಳು ಮಾರ್ತಾಳಂತೆ. ಬಲು ಚೆನ್ನಾಗಿರುತ್ತೆ ಅಂತ ಕೇಳಿದ್ದೇನೆ. ಮಹಾರಾಜರಾದವರು ಅಲ್ಲಿಗೆ ಹೋಗಿ ಕೊಂಡು ತರುವಂತಿಲ್ಲ. ಛದ್ಮ ವೇಷಧಾರಿಯಾಗಿ ಹೋಗಿ ತರಲು, ಕಣ್ಣು ಕಾಣಿಸುಲ್ಲ. ರಾಜಧಾನಿಯಲ್ಲಿ ಹೆಂಗಸೊಬ್ಬಳನ್ನೇ ಕಳಿಸುವುದು ಅಪಾಯ. ನಿನ್ನ ವಯಸ್ಸಿನವಳನ್ನು ಕಳಿಸುವುದೂ ಕ್ಷೇಮವಲ್ಲ. ಚೇಟಿ ಚೇಟರನ್ನು ಕಳಿಸೋಣ ಅಂದರೆ ನಮ್ಮ ಘನತೆಗೆ ಕುಂದು, ಮರ್ಯಾದೆಗೆ ಕಂಟಕ ಆದಕಾರಣ ನಮ್ಮ ನೂರು ಮಕ್ಕಳಲ್ಲಿ ಯಾರಾದರೂ ಮನೆಯಲ್ಲಿದಾರೆಯೇ ವಿಚಾರಿಸು ಇದ್ದವರನ್ನ ಕರೆದುಕೊಂಡುಬಾ. ಗೋಪ್ಯವಾಗಿ ಅವನ ಕೈಲಿ ಅಡುಗೂಲಜ್ಜಿ ಅಂಗಡಿಯಿಂದ ಹುರಿಗಾಳು ತರಿಸೋಣ ಎಂದು ಹೇಳಿದರು.

ಪತಿಯ ಕುರುಡು ಕಂಡು ತಾನೂ ಕುರುಡಾಗಿಸಿಕೊಂಡ ಗಾಂಧಾರಿ ದೇವಿಯು ಅರಮನೆಯ ನೂರೂ ಕೊಠಡಿಗಳನ್ನು ಹುಡುಕಿದಳು. ಅಡಿಗೆ ಮನೆ ಯಲ್ಲೆಲ್ಲಾ ವಿಚಾರಿಸಿದಳು ಒಬ್ಬ ಮಗನೂ ಮನೆಯಲ್ಲಿರಲಿಲ್ಲ.

ಖಿನ್ನಳಾಗಿ ಗೋಡೆಗಳನ್ನು ತಡವರಿಸಿಕೊಂಡು ಹಿಂತಿರುಗಿದ ಗಾಂಧಾರಿ ದೇವಿಯು "ಆರ್ಯಪುತ್ರ! ಇದೇನು ದೇವರ ಮಾಯೆಯೋ ಕಾಣೆ. ನೂರು ಮಕ್ಕಳನ್ನು ಹೆತ್ತು, ಸಾಕಿ, ಸಲಹಿದೆ. ಎಂದೂ ಏನೂ ಬೇಡದ ನೀವು ಇಂದು ಕೇವಲ ಅಲ್ಪವಾದ ಹುರಿಗಾಳು ಬಯಸಿದಿರಿ. ತರಲು ನೂರರಲ್ಲಿ ಒಬ್ಬ ಮಗನೂ ಸಿಗಲಿಲ್ಲ. ಒಬ್ಬನೂ ಮನೆಯಲಿಲ್ಲ. ಬೆಳಿಗ್ಗೆ ತಿಂಡಿ ತಿಂದು ಹೋದವರು ಮಧ್ಯಾಹ್ನ ಊಟಕ್ಕೂ ಬಂದಿಲ್ಲವಂತೆ ಮಕ್ಕಳನ್ನ ನೆಚ್ಚಬಾರದು ಅನ್ನಿಸುತ್ತೆ!" ಎಂದು ಹೇಳಿದಳು.

"ಛೇ! ಛೇ!! ಹಾಗೆನ್ನಬೇಡ, ಆರ್ಯೆ! ನಮಗೆ ನಮ್ಮ ಮಕ್ಕಳು ನೆರವಾಗ ಬೇಕು ಅಂತ ನಮ್ಮ ಇಷ್ಟವಿದ್ದರೆ, ನಾವು ಮಾಡುವ- ಮಾಡಬೇಕಾದ, ಕರ್ತವ್ಯ ವನ್ನು ಮಾಡಬೇಕು. ಅದನ್ನು ಮಾಡದೆ ವ್ಯಾಕುಲಪಡಬಾರದು" ಎಂದು ಧೃತರಾಷ್ಟ್ರ ಹೇಳುತ್ತಾ ಕಣ್ಣೊಜ್ಜಿಕೊಂಡನು.

"ಅದೇನು ಕರ್ತವ್ಯ! ನನ್ನ ಮಕ್ಕಳಿಗೆ ನಾನು ಏನು ತಾನೇ ಮಾಡದೆ ಇರೋದು ವಾರಕ್ಕೊಮ್ಮೆ ಎಣ್ಣೆ ನೀರು ಹಾಕುತ್ತೇನೆ, ತುಪ್ಪ ವೊಸಿರನ್ನು ನಾನೇ ಬಡಿಸುತ್ತೇನೆ. ಹಬ್ಬ ಹರಿದಿನ, ಹುಟ್ಟಿದ ಹಬ್ಬಕ್ಕೆಲ್ಲಾ, ನೂರು ಮಕ್ಕಳಿಗೂ ಹೊಸ ಹೊಸ ಪೀತಾಂಬರ ತಂದು ತೊಡಿಸುತ್ತೇನೆ, ಬೆಳಿಗ್ಗೆ ನೊರೆಹಾಲಿಗೆ ಕಲ್ಲಾರು ಹಾಕಿ ನಾನೇ ಕುಡಿಸುತ್ತೇನೆ ಎಂದಳು ಗಾಂಧಾರಿ ದೇವಿ.

"ಅವುಗಳೆಲ್ಲವರ ಕಾಲ ಮುಗಿದು ಹೋಯಿತು, ದೇವೀ! ಈಗ, ಇನ್ನು ಮೇಲೆ, ಬೆಳೆದ ಮಕ್ಕಳು ಮನೇಲಿರಬೇಕಾದರೆ, ಅವರಿಗೆಲ್ಲಾ ಬೇಗ ಮದುವೆ ಮಾಡಬೇಕು. ಕುಲ ಪುರೋಹಿತರನ್ನು ಕರೆಸು. ವ್ಯವಸ್ಥೆಮಾಡು. ಆಮೇಲೆ ಹುರಿಗಾಳು ತಂದುಕೊಡುಕ್ಕೆ ಒಬ್ಬ ಮಗನಾದರೂ ಸಿಕ್ಕುತಾನೆ!" ಎಂದು ಧೃತರಾಷ್ಟ್ರ ಮಹಾರಾಜರು ಅಪ್ಪಣೆ ಕೊಡಿಸಿದರು.

"ಒಗ್ಗಟ್ಟಿರಲಿ"

ಧಾಳಿ ಮಾಡಿ ಜೂಜುಗೋರರನ್ನು ಹಿಡಿಯಲೇಬೇಕು. ಎಂದು ಪೋಲೀಸ್ ನಾಯಕರು ಎಲ್ಲ ಸಿದ್ಧತೆಗಳನ್ನೂ ಮಾಡಿಕೊಂಡಿದ್ದರು. ರಾತ್ರಿ ಒಂಭತ್ತು ಗಂಟೆಗೆ ಸಿಳ್ಳು ಹೊಡೆದ ಕೂಡಲೇ ಸುತ್ತಮುತ್ತಲಿಂದ ಹದಿನಾಲ್ಕು ಜನ ಪೋಲೀಸ್ ಪ್ಯಾದೆಗಳು ಸಶಸ್ತ್ರರಾಗಿ ಆ ಮನೆಯನ್ನು ಸುತ್ತುಗಟ್ಟಬೇಕು. ಇನ್ನೂ ಆರು ಜನ ಪೋಲೀಸರು ನಾಯಕರ ಮುಂದಾಳುತನದಲ್ಲಿ ಮನೆ ಬಾಗಿಲು ತಟ್ಟಿ, ಒದ್ದು, ಗಲಾಟೆ ಹಚ್ಚಿ ಒಳಕ್ಕೆ ನುಗ್ಗಿ ಜೂಜಾಡ್ತಾ ಇರೋರನ್ನ ಮಾಲುಸಹಿತ ಹಿಡಿದು ದಸ್ತಗಿರಿ ಮಾಡಬೇಕು. ಅಕ್ಕಪಕ್ಕದ ಮನೆಯವರನ್ನು ಕರೆದು, ಅಲ್ಲೇ ಪಂಚನಾಮೆ ಮಾಡಿಸಿ, ಸಾಕ್ಷಿಗಳನ್ನೂ ಭದ್ರಪಡಿಸಬೇಕು. ಅಂತ ಎಲ್ಲಾ ಯೋಜನೆಗಳನ್ನೂ ಮಾಡಿಕೊಂಡಿದ್ದರು.

"ಪ್ಲಾನ್" ಹಾಕಿದಂತೆ, ಯಾರಿಗೂ ಅನುಮಾನ ಬರದಂತೆ ರಾತ್ರಿ ಒಂಭತ್ತಕ್ಕೆ 'ಆ' ಮನೆಗೆ ಧಾಳಿ ಹಾಕಿದರು

ಎಂಟೂ ಮೂಲೆಗಳಲ್ಲಿ ಹದಿನಾಲ್ಕು ಜನ ಪೋಲೀಸರು ಸಶಸ್ತ್ರರಾಗಿ ಕಾವಲು ನಿಂತರು.

ನಾಯಕರೊಡನೆ ಹೊರಟ ಆರು ಜನರೂ ಬಾಗಿಲನ್ನು ದಬ್ಬಿದಾಗ, ಅದು ತಾನಾಗಿಯೇ ತೆರೆದುಕೊಂಡಿತು. ದೀಪಗಳೆಲ್ಲಾ ಹಚ್ಚಿತ್ತು. ಒಳಕ್ಕೆ ಹೋದರೆ, ಸಿಂಹಜಾತದಲ್ಲಿ ನಾಲ್ಕು ಜನ ಕೂತಿದ್ದರು. ಒಬ್ಬನ ಕೈಲಿ ಮಾತ್ರ ಇಸ್ಪೀಟ್ ಪ್ಯಾಕ್ ಇತ್ತು.

"ಕಾನೂನು ವಿರುದ್ಧವಾಗಿ ಮೂರೆಲೆ ಆಟದ ಜೂಜು ಆಡ್ತಾ ಇಧೀರಿ ನೀವು" ಎಂದು ಶುರು ಮಾಡಿದರು ಪೋಲೀಸ್ ನಾಯಕರು, "ನಿಮ್ಮನ್ನು ದಸ್ತಗಿರಿ ಮಾಡ್ತೀನೆ" ಎಂದರು

"ಯಾರು? ನಾನೇ! ಈ ಊರಿಗೆ ನಾನು ಹೊಸಬ! ಸಂತೇ ವ್ಯಾಪಾರಕ್ಕೆ ಬಂದಿದ್ದೆ. ಈ ಹೋಟಲಿಗೆ ಬಂದೆ. ಇಲ್ಲಿ ಈಗ ಹೋಟಲಿಲ್ಲ ಅಂತ ಗೊತ್ತಾಯ್ತು, ಅದಕ್ಕೆ ಹೊರಟು ಹೋಗ್ತಾ ಇದ್ದೆ. ಅಷ್ಟರಲ್ಲೇ ನೀವು ಬಂದಿರಿ" ಎಂದ ಮೊದಲನೆಯವ.

"ಹಾಗೋ! ಹಾಗಾದರೆ ಕೈಲ್ಯಾಕೋ ಚಿಲ್ರೆ ಹಣ" ಅಂತ ಮೊದಲಿಸಿದರು ಪೋಲೀಸ್ ನಾಯಕರು.

“ ಸಂತೆ ವ್ಯಾಪಾರಕ್ಕೆ ಬಂದೋರ ಹತ್ತಿರ ಚಿಲ್ರೆ ದುಡ್ಡಿಲ್ದೇ ಇರುತ್ತ್ಯೆ ? ” ಎಂದು ಸಾವಧಾನವಾಗಿ ಕೇಳಿದ ಮೊದಲನೆಯವನು.

ಎರಡನೆಯವನ ಕಡೆ ಕಣ್ಣು ಹಾಯಿಸಿದರು ಪೋಲಿಸ್ ನಾಯಕರು. “ ನೀನ್ಯಾಕೆ ಬಂದೆ ಇಲ್ಲಿಗೆ, ಭಗವದ್ಗೀತಾ ಪಾರಾಯಣ ಮಾಡುಕ್ಕೆ ಬಂದೆಯಾ ? ” ಎಂದು ವಕ್ರದೃಷ್ಟಿಯಿಂದ ನೋಡುತ್ತಾ ಅವರು ಕೇಳಿದರು.

“ ಅದು ಹ್ಯಾಗೇ ಗೊತ್ತಾಯ್ತು ! ಸಾಹೇಬ್ರಾ ! ಅಂತ ಅವ ಒಳಜೇಬಿಂದ ಭಗವದ್ಗೀತೆಯ ಪ್ರತಿಯೊಂದನ್ನು ಹೊರಕ್ಕೆ ತೆಗೆದರು.

“ ದಿನಾಲೂ ರಾತ್ರಿ ಒಂಭತ್ತು ಗಂಟೆಗೆ ನಾಲ್ಕು ಶ್ಲೋಕಗಳನ್ನು ಪಠಿಸು, ನಿನಗೆ ಯಾವ ಕಷ್ಟವೂ ಬರುವುದಿಲ್ಲ ಅಂತ ನಮ್ಮ ಗುರುಗಳು ಅಪ್ಪಣೆ ಕೊಡಿಸಿದ್ರು” ಎಂದ ಅವ, ಕಣ್ಣು ರೆಪ್ಪೆ ಹಾರಿಸದೆ.

ಮೂರನೆಯವನ ಕಡೆಗೆ ಕಣ್ಣು ಹಾಯಿಸಿದರು. “ ನಿನ್ನ ಸಬೂಬು ಏನು ? ನಿನ್ನ ಕೈಲಿರೋ ಚೀಟಿಗಳು, ಜೂಜಿನ ಚೀಟಿಗಳಲ್ಲವೇ ? ” ಎಂದರು.

‘ ಈ ಚೀಟಿಗಳೇ, ಇವು ಬಸ್ ಟಿಕೆಟ್ಟುಗಳು. ನಾನು ಬಸ್ ಕಂಡಕ್ಟರು. ಪರಾಂಬರಿಸಬೇಕು. ಇದು ನನ್ನದ್ದೇ ಮನೆ, ಒಬ್ಬಂಟಿಗ. ಎರಡನೆಯವರನ್ನು ತೋರಿಸುತ್ತಾ, ಈತ ಇವತ್ತು ಬಸ್ಸಿನಲ್ಲಿ ಬಂದಾಗ, ಛತ್ರ ಎಲ್ಲಿದೆ ಎಂದರು ಒಬ್ಬರೇ ಇದೀರಿ ನಮ್ಮ ಮನೆಗೇ ಬನ್ನಿ ಅಂತ ಕರ್ಕೊಂಡು ಬಂದೆ ಅಷ್ಟರಲ್ಲಿ ಮೊದಲನೆಯವರು ಬಂದರು. ಊಟ ಸಿಗುತ್ತಾ ? ಕೊಠಡಿ ಬಾಡಿಗೆ ಇದೆಯಾ ಅಂತ ಕೇಳಿದರು. ಇದೇನು ಹೋಟ್ಲಾ ಅಂದೆ. ನಂಗೇನು ಗೊತ್ತು, ನಾನು ಪರ ಊರಿನವನು. ಈತ ಕರ್ಕೊಂಡು ಬಂದ ಅವನ್ನ ಕೇಳಿ ಅಂದ. ನಾಲ್ಕನೆಯೋನ್ನ ಕೇಳಿದೆ. ಮತ್ತೆ ಮನೆ ಮೇಲೆ ಹೋಟಲು ಅಂತ ಬೋರ್ಡು ಯಾಕೆ ಹಾಕಿದೀರಿ ಅಂದ ಅವ. ಬೋರ್ಡು ಎಲ್ಲಿದೆಯೋ ಅಂದೆ. ಹೋಗಿ ನೋಡೋ ಅಂದ ಅಷ್ಟರಲ್ಲೇ ನೀವು ಬಂದಿರಿ ಅಂದ

ನಾಲ್ಕನೆಯವನು ಪೆಚ್ಚು ಪೆಚ್ಚಾಗಿ ಕೈಲಿದ್ದ ಇಸ್ಪೀಟ್ ಪ್ಯಾಕನ್ನು ತಡವರಿಸುತ್ತಾ ಕೂತಿದ್ದ. ಪೋಲೀಸ್ ನಾಯಕನ ಕಣ್ಣು ಅವನ ಮೇಲೆ ಬಿತ್ತು.

ಮಾಲುಸಹಿತ ನೀನು ಸಿಕ್ಕಿದೆಯಲ್ಲಾ ಅಂದರು ನಾಯಕರು

“ ನಾನೇ ಇಸ್ಪೀಟ್ ಜೂಜು ಆಡ್ತಾ ಇದೇನೆ ? ಯಾರ ಜತೇಲಿ ಜೂಜೋ ! ಇವ ಬಂದ. ಹೋಟಲು ತೋರಿಸಪ್ಪಾ ಅಂದ ಹೋಟಲ ಬೋರ್ಡು ಈ ಮನೆ ಮೇಲಿತ್ತು ಇಲ್ಲಿಗೆ ಕರ್ಕೊಂಡು ಬಂದೆ. ಇಲ್ಲಿದ್ದೋರು ಜಗಳಕ್ಕೆ ಶುರು ಮಾಡಿದರು. ಬೇಜಾರಾಯ್ತು ಅದಕ್ಕೇ ಪೇಷೆಂಟ್ಸ್ ಆಡುಕ್ಕೆ ಅಂತ ಕೂತೆ ಎಂದ ನಾಲ್ಕನೆಯವ.

ಹೋಟಲು ಅಂತ ಬೋರ್ಡಿದೆಯೋ ನೋಡೋಣ ಒಸ್ರೀ ಅಂತ ನಾಯಕರು ಎಲ್ಲರನ್ನೂ ಎಬ್ಬಿಸಿಕೊಂಡು ಹೊರಟರು.

ಮೊದಲನೆಯವನು ಮುಂದೆ ಮುಂದೆ ಹೊರಟ. ಬಾಗಿಲ ಬಳಿ ಇದ್ದ ಕಿಟಿಕೇನ ಮುಚ್ಚಿದ. ಬಾಗಿಲಿಂದ ಹೊರಕ್ಕೆ ಹೋದ.

ಎಲ್ಲರೂ ಬಂದರು. ಬಂದು ಹೊರದೀಪ ಹಾಕಿಸಿದರು. ನೋಡುತ್ತಾರೆ! ಮಿಲಿಟರಿ ಹೊಟಲು ಅಂತ ಬೋರ್ಡು ಬರೆದಿತ್ತು.

ಪೋಲಿಸ್ ನಾಯಕರು ತಮ್ಮ ಸಿಬ್ಬಂದಿಯನ್ನು ಕರಕೊಂಡು ಹೊರಟು ಹೋದರು. ಹೋಗುವಾಗ " ಈ ಸಾರಿ ತಪ್ಪಿಸಿಕೊಂಡಿರಿ! ಹುಷಾರಾಗಿರಿ" ಎಂದು ಎಚ್ಚರಿಕೆ ಕೊಡುತ್ತಾ ಹೋದರು.

ನಾಲ್ವರೂ ಮನೆಯೊಳಕ್ಕೆ ಬಂದರು. ಬಾಗಿಲು ಹಾಕಿದರು. ಕಿಟಕಿ ತೆರೆದರು ಧಾರಾಳವಾಗಿ ಉಸಿರಾಡಿದರು.

ಮೊದಲನೆಯವ ಕಿಟಕಿ ಮೇಲೆ ಬೋರ್ಡು ಬರೆದು ಯಾವಾಗಲೂ ತೆರೆದಿಟ್ಟಿರೋದು ಬಲು ಒಳ್ಳೇ ಉಪಾಯ ಕಣ್ರೋ! ಎಂದ. ಬೇಕಾದಾಗ ಮುಚ್ಚಿದರೆ ಬೋರ್ಡು ಕಾಣಿಸುತ್ತೆ ಜಾಣತನ ಕಣೋ! ಅಂದ.

ಎರಡನೆಯವ ನಾಯಕರು ಪರಿಹಾಸ್ಯಮಾಡೋವಾಗ, ಭಗವದ್ಗೀತೆ ಪಾರಾಯಣ ಮಾಡ್ತೀಯಾ ಅಂತ ಕೇಳೋದು ಎಲ್ಲರ ಬಾಯಲ್ಲೂ ಇದೆ. ಸದ್ಯ! ಜೇಬಿನಲ್ಲಿ ಭಗವದ್ಗೀತೆ ಅಟ್ಟೆ ಇದ್ದ ನೋಟುಪುಸ್ತಕ ಇತ್ತು. ಜೂಜಾಡಿದ ಲೆಕ್ಕ ಬರೆದಿತ್ತು ಸಧ್ಯ! ಅವ ತೆಗೆದು ನೋಡಲಿಲ್ಲ. ಅದಕ್ಕೇ ಏನೋ ಭಗವದ್ಗೀತೆ ಇಂದ ಕಷ್ಟ ನಿವಾರಣೆಯಾಗುತ್ತೆ ಅಂತ ತಿಳಿದೋರು ಅನ್ನೊಂದು" ಎಂದು ಹೇಳಿದ.

ಮೂರನೆಯವ ಮನೆಗೆ ಹೋದಮೇಲೆ ಕೊನೇ ಮಗನಿಗೆ ಮುತ್ತು ಕೊಡ್ತೀನಪ್ಪಾ! ಬಸ್ ಟಿಕೆಟ್ ಕೂಡಿಡೋ ಕೆಟ್ಟ ಚಾಳಿ ಅವನಿಗೆ. ಎಂದಾದರೂ ಬಸ್ಸಿಗೆ ಸಿಕ್ಕಿಹಾಕಿಕೋತಿ ಅಂತ ಇವತ್ತು ಅವನ್ನ ಬೈದು, ಅವನ ಜೇಬಿನಲ್ಲಿದ್ದ ಟಿಕೇಟುಗಳನ್ನು ಕಿತ್ತುಕೊಂಡು ಬಂದಿದ್ದೆ. ಅದೇ ನನ್ನ ತಲೆ ಕಾಯ್ತಲ್ಲಾ! ಎಂದ

ನಾಲ್ಕನೆಯವ ನೀವು ಮೂರು ಜನರೂ ತಪ್ಪಿಸಿಕೊಂಡರೆ ನನ್ನೊಬ್ಬನ್ನ ಹೇಗೆ ಹಿಡಿದಾರು! ಆದರೂ ಜಟ್ಟಂತ ಸುಳ್ಳಿನ ಸರಾನ ಎಷ್ಟು ಚೆನ್ನಾಗಿ ಪೋಣಿಸಿದಿರಪ್ಪಾ! ನಿಮ್ಮ ಜತೇಲಿ ಜೂಜಾಡುವಾಗ ಬಲು ಹುಷಾರಾಗಿರಬೇಕು!

ಮಿಕ್ಕ ಮೂವರು! ನಮ್ಮ ನಮ್ಮಲ್ಲಿ ಮೋಸ ಮಾಡಿದವರುಂಟೆ?

ಹೊರಗಿನವರು ಬಂದರೆ, ಏನೇ ಬರಲಿ, ಯಾರೇ ಬರಲಿ, ನಮ್ಮಲ್ಲಿ ಒಗ್ಗಟ್ಟಿರಲಿ! ಎಂದು ಘೋಷಿಸಿದರು.


—ಕುಮಾರ್

ಒಳಕ್ಕೆ ಬಿಡ್ತಾರೆ!!

ಕಾಲೇಜಿನ ನಾಟ್ಯ ವಿಲಾಸಿ ಸಂಘದವರು, ಬಡ ಹುಡುಗರ ನಿಧಿಗಾಗಿ ಪುರ ಭವನದಲ್ಲಿ ನಾಟಕವನ್ನು ಏರ್ಪಡಿಸಿದ್ದರು. ಸಿನಿಮಾತಾರೆ ಹೆಸರಾಂತ ಕುಮಾರಿ ಕೌಶಲಳೇ ಅಧ್ಯಕ್ಷತೆ ವಹಿಸುವಳಿದ್ದಳು. ಕಾಲೇಜು ಹುಡುಗರೆಲ್ಲಾ ಮೂರು ವಾರದಿಂದ ಶ್ರೀಮಂತ ವರ್ತಕರ ಬಳಿಗೆಲ್ಲಾ ಹೋಗಿ ಟಿಕೇಟುಗಳನ್ನು ಮಾರಿ ಬಂದಿದ್ದರು. ಸುಮಾರು ಹಣವನ್ನೂ ಕೂಡಿಸಿದ್ದರು.

ಪುರ ಭವನದ ಹೊರ ಅಂಗಳದಲ್ಲಿ ಸ್ವಯಂಸೇವಕರು ಸಂಜೆ ೯ಕ್ಕೆ ಶುರುವಾಗುವ ನಾಟಕಕ್ಕೆ ನಾಲ್ಕು ಗಂಟೆಯಿಂದಲೇ ಬಂದು ಎಲ್ಲ ವ್ಯವಸ್ಥೆಗಳನ್ನೂ ಅಣಿಯಾಗಿ ಮಾಡಿದ್ದರು.

೯ ಗಂಟೆಗೆ ಇನ್ನೆರಡು ಮೂರು ನಿಮಿಷ ಇರುವಾಗ, ಸರಿಗೆರುಮಾಲು ರಸಭಣ್ಣೋರು ಟಗರು ನುಗ್ಗಿದಹಾಗೆ ನುಗ್ಗಿ ಬಂದರು. ಹೆಂಗಸರ ಕಡೆ ನಿಂತಿದ್ದ ಸ್ವಯಂಸೇವಕನೊಬ್ಬನನ್ನು ದರ್ಪದಿಂದ ಐದು ರೂಪಾಯಿ ಸೀಟು ಎತ್ಕಡೆ ಐತೋ ಎಂದು ಕೇಳಿದರು. ಕಾಲೇಜ ಸ್ವಯಂ ಸೇವಕ ಇವರನ್ನ ಒಂದುಕ್ಷಣ ನೋಡಿ, ಕಿರುನಗೆ ಸೂಸಿ ಬೆರಳು ಚಾಚಿ ದಾರಿ ತೋರಿ ಆಕಡೆ ಆ ಬಾಗಿಲ ಹತ್ತಿರ ಹೋಗ್ರಿ! ಪುರುಷರು ೫ ರೂಪಾಯಿ ಅಂತ ಬೋರ್ಡು ಹಾಕಿದ್ದಾರೆ. ಬೋರ್ಡು ನೋಡಿ ಹೆದರಬೇಡಿ. ೫ ರೂಪಾಯಿ ಟಿಕೇಟ್ ಇದ್ದರೆ, ಮೃಗಗಳನ್ನೂ ಒಳಕ್ಕೆ ಬಿಡ್ತಾರೆ!!



"ಇದೆಲ್ಲಾ ಸಮಾಧಿಗಳಲ್ಲ ಸ್ವಾಮಿ. ಮಾಜಿ ಮಂತ್ರಿಗಳು ಹಾಕಿದ ಅಸ್ತಿ ಭಾರ ಶಿಲೆಗಳು, ತಿಳೀತೆ.."

ಶಾಂತಿ ಅಂದರೆ ಹೀಗೇನೇ!!

—o—

ಸೋದರ ಮಾವ ನಮ್ಮೂರಿಗೆ ವರ್ಗವಾಗಿ ಬಂದಾಗ, ನನಗೆ ಎಂಟು ವರ್ಷ ವಯಸ್ಸಾಗಿತ್ತು. ಶಾಂತಿಗೆ ಐದು ವರ್ಷ. ಪಕ್ಕದ ಮನೆಯಲ್ಲೇ ಬಾಡಿಗೆಗೆ ಇದ್ದರು ಅಮ್ಮನಿಗೋ ಅವರಣ್ಣನ ಮಗಳನ್ನು ಕಂಡರೆ ಬಲು ಅಚ್ಚು ಮೆಚ್ಚು-ಎರಡೂ ಮನೆಯಲ್ಲಿ ಅವಳೊಬ್ಬಳೇ ಹೆಣ್ಣು ಮಗು ಹೀಗಾಗಿ ಹೆಚ್ಚು ಹೊತ್ತನ್ನು ನಮ್ಮನೆಯಲ್ಲೇ ಕಳೆಯುತ್ತಿದ್ದಳು. ದಿನಕ್ಕೆ ಎರಡು ಸಲವಾದರೂ ಅವಳು ನನ್ನ ಜತೆ ಜಗಳ ಹಾಕಿ, ಕಿತ್ತು ಪರಚಾಡಿ ಕಡೆಗೆ ಅಮ್ಮನ ಹತ್ತಿರ ನನ್ನ ಮೇಲೇ ಚಾಡಿ ಹೇಳಿ ಹೊಡಿಸುತ್ತಿದ್ದಳು. ನಿನ್ನ ಹೆಸರು ಶಾಂತಿ ಅಲ್ಲವೇನೇ ಎಂದರೆ ಕಾಡುಬೆಕ್ಕು ಮೇಲೆ ಬಿದ್ದ ಹಾಗೆ ಬಿದ್ದು ಪರಚಿ, ಗುಂಡಿಗಳನ್ನು ಕಿತ್ತು, ಬನೀನ್ ಹರಿದು, "ಅತ್ತೇ! ಅತ್ತೇ! ನನ್ನ ಜಡೆ ಎಳೀತಾನೆ ನೋಡೆ" ಅಂತ ತಾನೇ ಕಿರುಚುತ್ತಿದ್ದಳು. ಬಾಲ್ಯದ ನೆನಪು ಚೆನ್ನಾಗಿ ಇದೆ.

ಮೂರು ವರ್ಷದ ಮೇಲೆ ಸೋದರ ಮಾವನಿಗೆ ವರ್ಗ ಆಯಿತು. ನಾನು ಹಗುರಾಗಿ ಉಸಿರುಬಿಡುವಂತೆ ಆಯಿತು. ಹತ್ತಾರು ವರ್ಷಗಳಾದುವು.

ಶಾಂತಿಯ ಮದುವೆ ತುಂಕೂರಿನಲ್ಲಿ ನಡೆಯಿತು. ಅಮ್ಮನ ಜತೆ ನಾನು ಹೋಗಿದ್ದೆ ಇಂಥ್ಹೋಳ ಕತ್ತಿಗೆ ತಾಳಿ ಕಟ್ಟಿ, ತನ್ನ ಕೊರಳಿಗೆ ನೇಣು ಹಾಕಿಕೊಳ್ಳುವ ಗಂಡನ್ನು ನೋಡಬೇಕೆಂಬ ಚಪಲ ನನಗೂ ಇತ್ತು. ಅವನೆಂಥ ಕರಾಚೂರಿ ಆಸಾಮಿ ಆಗಿದ್ದ ಅಂತ. ವರಪೂಜೇಗೆ ಕೈಲಿಟ್ಟ ಶೃಂಗರಿಸಿದ ತೆಂಗಿನಕಾಯಿ ಸಾಕಷ್ಟು ದಪ್ಪನಾಗಿಲ್ಲ ಅಂತ ರೇಗಾಡಿ ಕಡೆಗೆ ಎಳನೀರೊಂದನ್ನೇ ಕೈಲಿ ಹಿಡಿದುಕೊಂಡು ಪೂಜೆ ಮಾಡಿಸಿಕೊಂಡ. ಹೋಮಕ್ಕೆ ಹಾಕಿದ ತುಪ್ಪ ಹಸನಲ್ಲ ಎಂದು ಮುಖ ದಪ್ಪ ಮಾಡಿಕೊಂಡ. ನಾಗೋಲಿ ಆನೆಯ ಕಿವಿ ಅಗಲ ಸಾಲದು ಎಂದು ಆನೆಯನ್ನೇ ಅಂಗಾಲಿನಿಂದ ಹೊಸೆದುಬಿಟ್ಟ.

ಮದುವೆಯಿಂದ ಹಿಂತಿರುಗುವಾಗ ಅಂತ ಈ ನೂತನ ದಂಪತಿಗಳಲ್ಲಿ ಯಾರ ಬಗ್ಗೆ "ಅಯ್ಯೋಪಾಪ" ಅಂತ ಕನಿಕರ ಪಡಬೇಕು ಎಂದು ನಿರ್ಧರಿಸಲು ಸಾಧ್ಯವೇ ಆಗಲಿಲ್ಲ.

—ಎರಡು ಮೂರು ದಶಕಗಳಾದುವು.

ನನ್ನ ಐವತ್ತನೆ ಹುಟ್ಟಿದ ಹಬ್ಬವನ್ನು ನಮ್ಮಮ್ಮ ಅದ್ಧೂರಿಯಿಂದ ಆಚರಿಸಿದಾಗ ಶಾಂತಿ ಮತ್ತು ಅವಳ ಗಂಡ ಇಬ್ಬರೂ ಬಂದಿದ್ದರು. "ಜಯನಗರದಲ್ಲಿ ಮನೆ ಕಟ್ಟಿಸಿ ಕೊಂಡಿದ್ದೇನೆ, ಯಾವಾಗಲಾದರೂ ಬನ್ನಿ" ಎಂದು ಆತ ನನ್ನನ್ನು ವಿಶ್ವಾಸದಿಂದ ಕರೆದ. ರಿಟೈರ್ ಆಗಿದೆ, ಮನೇಲೇ ಇರ್ತೇನೆ ಎಂದೂ ಹೇಳಿದ. ಶಾಂತಿ ಕೂಡ ಬಾಪ್ಪ ಯಾವಾಗಲಾದರೂ ಪುರಸೊತ್ತು ಮಾಡಿಕೊಂಡು ಎಂದಳು. ಈ ಆಮಂತ್ರಣವನ್ನು ಜ್ಞಾಪಿಸಿಕೊಂಡು, ಇವರಿಬ್ಬರ ಸಂಸಾರದಲ್ಲಿ ಅದೆಂಥಾ ಶಾಂತಿ ಇರುತ್ತೆ ನೋಡೋಣ, ಭಾಷಣ ಮಾಡುಕ್ಕೆ ಸಹಾಯವಾಗುತ್ತೆ ಅಂತ ಶನಿವಾರ ಮಧ್ಯಾಹ್ನ ಕಚೇರಿ ಮುಗಿಸಿಕೊಂಡು ಅವರ ಮನೆಗೆ ಹೋದೆ.

ಸುಮಾರು ನಾಲ್ಕು ಗಂಟೆಯಾಗಿರಬಹುದು ಆಗ.

ಬಾಗಿಲು ತಟ್ಟಿದೆ. ಎರಡು ಮೂರು ಬಾರಿ ತಟ್ಟಿದೆ. "ಯಾರದು, ಬಂದೇ! ಯಾಕೆ ಒಂದೇ ಉಸುರಿಗೆ ಬಾಗಿಲು ತಟ್ತೀರಿ. ಬದುಕಿದ್ದೀನಿ ಇನ್ನೂ ತಡೀರಿ ಬಂದೇ" ಎಂಬ ಕೂಗು ಒಳಗಿನಿಂದ ಬಾಗಿಲ ಮೇಲಿನ ಗವಾಕ್ಷದಲ್ಲಿ ಕೇಳಿಸಿತು ಶಾಂತಿ ಮೊದಲಿದ್ದ ಹಾಗೇ ಇದ್ದಾಳೆ ಅಂತ ಖಾತರಿಯಾಯ್ತು.

ಬಾಗಿಲು ತೆರೆಯಿತು. ಬಲಗೈಯಲ್ಲಿ ಮೊಂಡು ಕಸಪರಿಕೆಯನ್ನು ಹಿಡಿದುಕೊಂಡು, ತಲೆಗೆ ಖಾಂಧಾರಿಯವರ ಹಾಗೆ ಬಟ್ಟೆ ಕಟ್ಟಿಕೊಂಡು ಕೆಂಚಾನೆ ಮುಖದ ಶಾಂತಿ ಪ್ರತ್ಯಕ್ಷವಾದಳು.

"ನೀನೇನೇನೋ! ಇವರು ಬಂದ್ಬಿಟ್ರು ಅಂತ ಅಂದುಕೊಂಡೆ ಬಾಪ್ಪ ಬಾ. ನೆಶ್ಯ ತರುಕ್ಕೆ ಹೋಗಿದ್ದಾರೆ. ಈಗಲೇ ಬಂದು ಬಿಡೋರು" ಅಂತ ವಿಶ್ವಾಸದಿಂದಲೇ ಕರೆದಳು.

"ಏನೋ ಕೆಲಸ ಮಾಡ್ತಿರೊ ಹಾಗಿದೆ, ತುಂಬಾ ಹೇಳಿದ್ದಿರಲ್ಲಾ! ನೋಡಿಕೊಂಡು ಹೋಗೋಣ ಅಂತ ಬಂದೆ, ಇನ್ನು ಯಾವಾಗಲಾದರೂ ಬರ್ತೀನಿ ಎಂದು ಕಾಲುಗಳನ್ನು ಹಿಂದಕ್ಕೆಳೆದೆ." ಬೇಡ, ಬೇಡ! ಬಾ ಅರಳು ಹುರೀತಾ ಇದ್ದೆ, ಇನ್ನೊಂದೆರಡು ಉಬ್ಬೆ ಹುರಿದರೆ ಕೆಲಸ ಮುಗೀತು. ಅಡಿಗೆ ಮನೇಲಿ ಕೂತುಕೊ ಬಾ ಎಂದು ಅಂದಳು.

ಅಡಿಗೆ ಮನೆಗೆ ಹೋಗಿ ಕೂತುಕೊಂಡೆ ಒಲೆ ಮೇಲಿನ ಮರಳಿದ್ದ ಬಾಂಡ್ಲಿಗೆ ಭತ್ತ ಹಾಕಿ ಮೊಂಡು ಕಸಪರಿಕೇಲಿ ಅದನ್ನು ಹುರಿಯುತ್ತಾ, ಮನೇಲಿ ಎಲ್ಲರೂ ಚೆನ್ನಾಗಿದಾರೆಯೇ? ದೊಡ್ಡ ಮಗಳ ಬಾಣಂತನ ಆಯ್ತೇ, ಅಮ್ಮನಿಗೆ ಅವಲಕ್ಕಿ ತಿನ್ನುಕ್ಕಾಗತ್ಯೇ, ಎಂದೆಲ್ಲಾ ಕ್ಷೇಮ ಸಮಾಚಾರವನ್ನು ಕೇಳಿದಳು. ಎಲ್ಲವನ್ನೂ

ಹೇಳಿ, ಬಂದ ಕಾರಣವನ್ನೂ ಹೇಳಿಯೇಬಿಟ್ಟೆ. ವಯಸ್ಸಾಗಿದೆ ಅನ್ನೋ ಧೈರ್ಯದಿಂದ.

ಭತ್ತ ಹುರಿಯೋ ಚಟಪಟಕ್ಕೆ ಸರಿಯಾಗಿ ಅವಳೂ ಕಡ್ಡಿ ಮುರಿದ ಹಾಗೆ ಹೇಳಿದಳು. "ಇವರಿಗೆ ಕೋಪ ಬಂದಾಗ, ಅದನ್ನು ಇಳಿಸೋಕೆ ಹದನಾಗಿ ಹುರಿದ ಕಾಯಿಹುರೀಟ್ಟು, ನೆಲ್ಲಿಕಾಯಿ ರಸ, ಕಲೆಸಿ ಕೊಟ್ಟರೂ ಆಯಿತು, ಇವರು ಎಂದೋ ಬರೆದ ಪದ್ಯವೊಂದನ್ನು ಪಲುಕಿದರೂ ಆಯಿತು ಅಥವಾ ಷರ್ಟು ಷರಾಯಿಗೆ ಗುಂಡಿ ಹಾಕುತ್ತ ಕೂತರೂ ಆಯಿತು. ಇವರ ಕೋಪವೆಲ್ಲಾ ಇಳಿದುಹೋಗುತ್ತೆ. ಆಗ ನಾನು ರೇಗಿ ಅತ್ತೂ ಕರೆದು ಸೆರಗಿನಲ್ಲಿ ಮುಖ ಒರೆಸಿಕೋತೀನಿ. ಒದ್ದೆ ಸೆರಗು ನೋಡಿ ಹೊಸ ಸೀರೆ ತಂದುಕೊಡ್ತಾರೆ. ನೋಡುಕ್ಕೆ ಕರಾಚೂರಿ ಕಣೋ ಆದರೆ ಹಸು, ಮಗುವಿನ ಹೃದಯ. ಹುಡುಗತನದಲ್ಲಿ ನೊಂದಿದ್ದಕ್ಕೆ ಈಗ ಹಾಗೆ ಎಗ ರಾಡ್ತಾರೆ" ಎಂದು ವಿವರಿಸಿದಳು.

ಕಾಯಿ ಹುರೀಟ್ಟು ತಿಂದು ದ್ರಾಕ್ಷಿ ಶರಬತ್ತು ಕುಡಿದು ಹೊರಟು ನಿಂತಾಗ "ಮುಂದಿನ ಸಲ ಬರುವಾಗ ಹೆಂಡ್ತಿ ಮಕ್ಕಳ್ನೂ ಕರಕೊಂಡ ಬಾಪ್ಪ" ಅಂತ ಆದರ ದಿಂದ ಬೀಳ್ಕೊಟ್ಟಳು.

ಹಿಂತಿರುಗಿ ಬರುವಾಗ ಯೋಚಿಸಿದೆ. ಸಿಡಿಲು ಮರಿಗಳಿದ್ದ ಹಾಗೆ ಇರುವ ಇವರಿಬ್ಬರೂ, ಎಷ್ಟು ಬೇಗ ಒಬ್ಬರನ್ನೊಬ್ಬರು ಅರಿತು ಶಾಂತಿಯನ್ನು ಸಂಸಾರದಲ್ಲಿ ಸಾಧಿಸಿಕೊಂಡಿದ್ದಾರೆ ಎಂದು ತಲೆ ತೂಗಿದೆ.

ಎಷ್ಟೋ ಸಂಸಾರಗಳನ್ನು ನೋಡಿದ್ದೇನೆ. ಸಾಮಾನ್ಯವಾಗಿ ಚೆಂದುಳ್ಳಿರೂಪಿನ ಹೆಂಡತಿ ಬಲು ಚಾಲೂಕಾಗಿ ಬಳುಕಾಡಿದರೆ, ಗುಮಾಸ್ತೆ ಗಂಡನಿಗೆ ತಲೆ ಮೇಲೆ ಜತೆ ಕೋಡು ಬಂದಂತೇ ಆಗುತ್ತೆ. ಕೋಡು ಬೆಳೆದ ಗಂಡನ ಸಂಸಾರದಲ್ಲಿ ಶಾಂತಿ ಹೇಗಾದರೂ ಸಾಧ್ಯ?

ಮಸಲಾ ಗಂಡ ರೂಪವಂತ, ಗುಣವಂತ, ಶ್ರೀಮಂತ, ಪ್ರಾಣಕಾಂತ, ಎಲ್ಲವೂ ಆದರೆ ಹೆಂಡತಿಗೆ ಸಂಶಯದ ಸೆರಗೇ ಭೂಷಿಂಗವಾಗುತ್ತೆ. ಗಂಧದ ಕೋಟೀಗೆ ಕೆಲ ಸದ ಮೇಲೆ ಗಂಡ ಹೋಗಿ ಬಂದರೂ, ಅವನ ವಾಸನೆ ಹಿಡಿದೇ ಹೆಂಡತಿ ಮುಖ ಶಿಂಡರಿಸಿಕೊಳ್ಳುತ್ತಾಳೆ. ಅಂದ ಮೇಲೆ ಶಾಂತಿ ಎಲ್ಲಿಂದ ಬಂತು?

ಅಥವಾ ಕುರೂಪಿ ಕುಪ್ಪಯ್ಯ, ಕಂಚೀ ಕಡಸು ಕಾವೇರಿಬಾಯನ್ನು ಮದುವೆ ಯಾದ ಅನ್ನಿ. ಕಂತೆಗೆ ತಕ್ಕ ಬೊಂತೆ, ಪಾಲಿಗೆ ಬಂದದ್ದು ಪಂಚಾಮೃತ ಅಂತ ಶಾಂತಿಯಿಂದ ಸಂಸಾರ ಮಾಡ್ತಾರೇ ಅಂತೀರಾ? ಇಲ್ಲವೇ ಇಲ್ಲ. ಪಾಲಿಗೆ ಬರದೇ

ಇರುವ ಪಂಚೇರು ವಿಷವೇ ಚೆನ್ನು ಅಂತ ಅದಕ್ಕೆ ಹಂಬಲಿಸುತ್ತಾ, ಸಂಸಾರದಲ್ಲಿ **ಶಾಂತಿಗೆ ಸೊನ್ನೆ ಹಾಕುತ್ತಾರೆ.**

ಅದಕ್ಕೇ ನೋಡಿ ಪ್ರಗತಿ ಹೊಂದಿದ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಅದರಲ್ಲೂ ಕಲಾ ನಿಕೇತನ ಅನ್ನಿಸಿಕೊಂಡ, Hollywood ಅಂದರೆ ಅಮೆರಿಕಾದ ತಾರಾ ಮಂಡಲ ಪೇಟೆ, ಅಲ್ಲಿ ಶಾಂತಿಯನ್ನು ಸಂಸಾರದಲ್ಲಿ ಸ್ಥಾಪಿಸಲಿಕ್ಕೋಸ್ಕರ ತಿಂಗಳಿಗೋ ವರ್ಷಕ್ಕೋ ಎರಡು ಮೂರು ಸಲ ಹೊಸಾ ಹೊಸ ಸಂಸಾರವನ್ನೇ ಹೂಡುತ್ತಾರೆ. ಹೊಸದರಲ್ಲಿ ಅಗಸ ಗೋಣೇನ ಎತ್ತಿತ್ತಿ ಬಡೆದ ಹಾಗೆ ಸಂಸಾರ ಮಾಡ್ತಾರೆ. ಹೊಸತು ಹಳಸಿದಾಗ, ಬೇರೆ ಸಂಸಾರೇನೇ ಹೂಡ್ತಾರೆ ಹಳಸಿದ್ದನ್ನ ಬಿಸಿಮಾಡಿ ಒಗ್ಗರಣೆ ಹಾಕಿ ಇಂಗು ತಾಕಿಸಿ, ನಿಂಬೇಹುಳಿ ಹಿಂಡಿ, ಹಸನು ಮಾಡೋ ಗೋಜಿಗೇ ಹೋಗುವುದಿಲ್ಲ. ಒಂದೇ ತರಹ ಶಾಂತಿಯೂ ಇರಬೇಕು. ಒಂದೇ ಸಂಸಾರವೂ ಇದ್ದೇ ಇರಬೇಕು ಅಂತ ಅವರೇನೂ ಹಠ ಹಿಡಿಯುವುದೇ ಇಲ್ಲ. ನಮಗೆ ಈ ನಡವಳಿಕೆ ಸ್ವಲ್ಪ ಸೋಜಿಗವಾಗಿ ಕಾಣಬಹುದು. ಆದರೆ ನಮ್ಮ ಪುರಾಣ ಪುಣ್ಯ ಕತೆಗಳಲ್ಲೂ ಲಾಗಾಯ್ತಿನಿಂದ ಇದನ್ನೇ ಅನುಸರಿಸುತ್ತಿದ್ದರು ಸ್ವರ್ಗದಲ್ಲಿ ಮೇನಕೆಯ ಮೇಲೆ ಕೋಪಬಂದು, ಶಾಂತಿ ಭಂಗವಾದಾಗ ಇಂದ್ರ ಶಾಪ ಕೊಟ್ಟು ಭೂಲೋಕಕ್ಕೆ ಹೋಗಿ ಸಂಸಾರ ನಡೆಸಿಬಿಟ್ಟು ಬಾ ಅಂತ ಕಳಸಿ ಕೊಡಲಿಲ್ಲವೇ. ಇಲ್ಲಿಗೆ ಬಂದು ಬೇರೆ ಸಂಸಾರ ಹೂಡಿ ಬುದ್ಧಿ ಕಲಿತುಕೊಂಡು ತಬ್ಬಲಿ ಮಗುವನ್ನ ಅನಾಥ ಅರಮನೆಯಲ್ಲಿ ಬಿಟ್ಟು ಮೇನಕೆ ಇದ್ದು ಇದ್ದ ಹಾಗೇ ಹಿಂತಿರುಗಿ ಹೋಗಲಿಲ್ವೇ ? ನಮ್ಮಲ್ಲಿ ಕೂಡ ಅನಾದಿಯಾಗಿ ಸಂಸಾರದಲ್ಲಿ ಶಾಂತಿ ಗಳಿಸಲು ಅಥವಾ ಉಳಿಸಲು ಹೊಸಾಹೊಸ ಸಂಸಾರಗಳನ್ನೇ ಹೂಡುತ್ತಿದ್ದರು ಅಂತ ಸ್ಪಷ್ಟವಾಗಿದೆಯಲ್ಲವೇ ?

ಅರಿವು, ತಿಳಿವಳಿಕೆ, ಬುದ್ಧಿ ಇವೆಲ್ಲಾ ಜೀವನ ಪ್ರಗತಿಯಲ್ಲಿ ಬಂದ ಮನುಷ್ಯನಿಗೆ ಮಾನಸಿಕ ತಾಪತ್ರಯದಿಂದ ಸಂಸಾರದಲ್ಲಿ ಶಾಂತಿ ಭಂಗವಾಗ ಬಹುದು ಅಂತ ಅರ್ಥವಾಯ್ತು. ಆದರೆ ಬುದ್ಧಿ ಜೀವಿಯಲ್ಲದ ಕ್ರಿಮಿ ಕೀಟಗಳು ಸಂಸಾರದಲ್ಲಿ ಗಂಡ ಹೆಂಡಿರಂತೆ ಬಾಳಿ ಶಾಂತಿ ಜೀವನ ನಡೆಸುತ್ತವೆಯೋ ಎಂಬ ಯೋಚನೆ ಬಂತು. ಆಗ ನಾನು ಕೊಠಡಿಯಲ್ಲಿ uneasy chair ಮೇಲೆ ಬಿದ್ದುಗೊಂಡಿದ್ದೆ. ಲೊಚ ಲೊಚ ಶಬ್ದ ಕೇಳಿಸಿತು. ಸುತ್ತಲೂ ನೋಡಿದೆ ಯಾರೂ ಇತ್ತಿಲ್ಲ. ತಲೆ ಯೆತ್ತಿ ನೋಡಿದೆ ಗೋಡೆಯ ಮೇಲೆ ಹಲ್ಲಿಯೊಂದು ಹಬ್ಬಿಕೊಂಡಿತ್ತು. ಹಾಗೇ ಕಣ್ಣು ಹಾಯಿಸಿದೆ. ಅಲ್ಲೇ ಒಂದು ಧಡೂತಿ ಜೇಡರಹುಳು ಬಲೆ ಕಟ್ಟಿಕೊಂಡು ಮಧ್ಯೆ ಇದ್ದ ಅಂತಃಪುರದಲ್ಲಿ ಪವಡಿಸಿತ್ತು. ಚಿಕ್ಕ ಜೇಡ ಒಂದು ಬಲೆಯ ಮೇಲೆ ಬಂದು, ಬಲೆಯ ತಂತಿಗಳ ಮೇಲೆ ನೃತ್ಯವಾಡಲಾರಂಭಿಸಿತು. ಅಂತಃಪುರದಲ್ಲಿ ಹೆಣ್ಣು ಜೇಡರ ಹುಳು ಕಣ್ಣಂಚಿನಿಂದ ಈ ನೃತ್ಯವನ್ನೂ ನೋಡಿತು.

ಆದರೂ ಬಿಗುಮಾನದಿಂದಲೇ ಕುಳಿತಿತ್ತು. ಮಂದ್ರ ಸ್ಥಾಯಿಯಲ್ಲಿ ನಾಚ್ ಮಾಡುತ್ತಿದ್ದ ಗಂಡು ಜೀಡರ ಹುಳು ತೀವ್ರ ಸ್ಥಾಯಿಯಲ್ಲಿ ಹೆಜ್ಜೆಗಳನ್ನು ಹಾಕಲು ಶುರುಮಾಡಿತು. ಒಂದೊಂದು ಕಾಲಿನಲ್ಲೂ ಬಲೆಯ ಒಂದೊಂದು ತಂತಿಯನ್ನು ಆರು ತಂತಿ ಪಿಟೀಲಿನ ತರಹ, ಆರು ಕಾಲುಗಳಿಂದ ನುಡಿಸುತ್ತಾ ಗಂಡು ಜೇಡರ ಹುಳುವು ಅಂತಃಪುರದ ಹತ್ತಿರ ಹತ್ತಿರಕ್ಕೆ ಸಾಗಿತು ಕಡೆಗೆ ಮುಕ್ತಾಯ ಬಾರಿಸಿತು. ಆಗ ಅಂತಃಪುರದಿಂದ ಬೃಹನ್ ಜೂಲಿಯಟ್ ಬಾಲೆ ರೋಮಿಯೋ ಜೇಡನ ಕಡೆ ನೋಡಿತು. "ಆರ್ಯಪುತ್ರ! ನಿನ್ನನ್ನು ವರಿಸಲು ನನ್ನ ಮನಸ್ಸು ಕಾತುರ ಗೊಂಡಿದೆ. ನಿನ್ನ ಅನಾದಿ ನೃತ್ಯವರ್ತನೆಯನ್ನು ಕಂಡು ಸುಪ್ರೀತಳಾಗಿದ್ದೇನೆ" ಎನ್ನುವ ರೀತಿಯಲ್ಲಿ ನಡೆಯುತ್ತಾ ಅಂತಃಪುರದಿಂದ ಹೊರಕ್ಕೆ ಬಂದಳು. ಬಲೆಯ ತಂತಿಗಳೆಲ್ಲವೂ ಓಲಗ ಊದಿದುವು. ಸಂಸಾರ ಶುರುವಾಯ್ತು ಮಂಡೋದರಿ ಜೇಡಬಾಲೆ ಹೆಂಡತಿಯಾದಳು.

ನೋಡುತ್ತಾ ಇಧೀನಿ. ಮಂಡೋದರಿ ಗಂಡನನ್ನು ಚುಂಬಿಸಿದಳು. ನೋಡ್ತಾನೆ ಇಧೀನಿ. ಮೆಲ್ಲಗೆ ಗಂಡನನ್ನು ಕಚ್ಚಿದಳು. ಆಮೇಲೆ ಸ್ವಲ್ಪ ಗಟ್ಟಿಯಾಗೇ ಕಚ್ಚಿದಳು. ಕಡೆಗೆ ಕಟಕಾರಿಸೇ ಬಿಟ್ಟಳು. ನೋಡ್ತಾನೇ ಇಧೀನಿ!! ತಿಂದು ಗಂಡನನ್ನು ನುಂಗೇಬಿಟ್ಟಳು. ಅಂತಃಪುರಕ್ಕೆ ಮಂದ ಗಮನದಿಂದ ಮಂದಹಾಸದ ಶಾಂತಿ ನಗೆಯನ್ನು ಸೂಸುತ್ತಾ ಹೋಗಿ ಪವಡಿಸಿದಳು.

ಶಾಂತಿ ಏರ್ಪಟ್ಟಿತ್ತು.

ಬುದ್ಧಿ ಜೀವಿಗಳಲ್ಲದ ಅಂದರೆ ನಮ್ಮ ಮಾನವರಹಾಗೆ ಬುದ್ಧಿ ಜೀವಿಗಳಲ್ಲದ ಕ್ರಿಮಿಕೀಟಗಳ ಸಂಸಾರದಲ್ಲಿ ಶಾಂತಿಯನ್ನು ಒಮ್ಮೊಮ್ಮೆ ಗಂಡಹೆಂಡಿರು ದೈಹಿಕವಾಗಿ ಹೀಗೆ ಸಂಪಾದಿಸುತ್ತವೆ.

ಬುದ್ಧಿ ಇರುವ ಜೀವಿಗಳು ನಾವು ಬುದ್ಧಿಯನ್ನು ಉಪಯೋಗಿಸಿಕೊಳ್ಳದೆ ಇದ್ದರೆ, ಗಂಡ ಹೆಂಡತಿಯರು ಪರಸ್ಪರ ಅರಿಯದೆ ಇದ್ದರೆ ಸಂಸಾರದಲ್ಲಿ ಶಾಂತಿ ಯನ್ನು ಮಾನಸಿಕವಾಗಿ ಅದೇರೀತಿ ಗಂಡನ್ನು ನುಂಗಿಯೇ ಸಾಧಿಸುತ್ತೇವೇನೋ ಎಂದು ಅನ್ನಿಸುತ್ತದೆ.

ಗಂಡಹೆಂಡಿರ ಜಗಳ ಗಾದೆ ಹೇಳಿದ ಹಾಗೆ!!



“ ಅಯ್ಯೋ! ಇದು ನನ್ ಮನೆ ಅಲ್ಲ ನನಗಿನ್ನೂ ಮದುವೆಯಾಗಿಲ್ಲ ಎಲ್ಲೊ ನೋಡ್ತಾ ಬಂದ್ಬುಟ್ಟಿದಿನಿ”

ಟೋಪಿ ಕೊಡಿ!

“ ತಾವೇನೇನು ಕೆರೆಯಿಂದೆತ್ತಿ
ಬದುಕ್ಸಿದ್ ನನ್ ಮಗನ್ನ?”

“ ನಾನೆ ಸಾರ್, ಅದೇನ್ ಮಹಾ
ಎತ್ ಹಾಕ್ಬಿಟ್ಟೆ ಮಗೂನ...”

“ ಅದೇನ್ ಮಹಾನೇ? ಚೆನ್ನಾಯ್ತುಬಿಡಿ
ಹುಡುಗನ್ ತಲೇಲಿದ್ ಟೋಪಿ ಕೊಡಿ”

(Ken Murray ಪ್ರೇರಿತ)


—ರಾಮಿ

ಎತ್ತೇ ಮೊದಲು!

ಲಿಂಗಪ್ಪನಿಗೆ ಬಲು ದುಃಖವಾಗಿತ್ತು. ಹಳ್ಳಿಯಿಂದ ಬಂದು ಇನ್ನೂ ಎಂಟು ದಿನ ಆಗಿರಲಿಲ್ಲ. ಅಷ್ಟರಲ್ಲೇ ಅಣ್ಣ ಸತ್ತುಹೋದ ಅಂತ ತಂತಿ ಬಂದಿತ್ತು. ರಜಾ ತೊಗೊಂಡು ತಿರುಗಿ ಹಳ್ಳಿಗೆ ಹೋದ. ಅಣ್ಣನ ಒಬ್ಬನೇ ಮಗ ಬಸ್ ಸ್ಟಾಂಡಿಗೆ ಆಳನ್ನು ಕರಕೊಂಡು ಬಂದಿದ್ದ. ಸಾಮಾನು ತೆಗೆಸಿಕೊಂಡು ಮನೆಗೆ ಹೋಗ್ತಾ ಇರೋವಾಗ ವಿಚಾರಿಸಿದ.

"ಏನಾಗಿತ್ತು ಹೈದಾ? ವಾರದ ಹಿಂದೆ ಗಟ್ಟಿಮುಟ್ಟಾಗಿದ್ದ. ಜಟ್ಟಂತ ಸಾಯುಕ್ಕೆ ಏನಾಗಿತ್ತು? ಏನಾವ ಬೇನೆ ಬಂದಿತ್ತಾ! ಮರ್ದಿಂದ ಬಿದ್ನಾ!"

ಹೈದ ಹೇಳಿದ. "ಹಂಗೇನೂ ಆಗ್ಲಿಲ್ಲ ಚಿಕ್ಕಾಯ್ನ! ದೊಡ್ಡೆತ್ತು ಇದ್ದಿಲ್ಲಾ ಅರಮನೇಲಿ ಕೊಂಡು ತಂದಿದ್ವು. ಅದಕ್ಕೇನೋ ಹೊಟ್ಟೆ ಉಬ್ಬರಿಸಿಕೊಂಡು ಬಿದ್ದು ಬಿಡ್ತು. ಅಯ್ಯ ಪಂಡಿತರನ್ನ ಕರೆಸ್ದ. ಬಂದು ನೋಡಿ ಅವರು ಧೂಳಿ ಕಳಿಸ್ಕೊಟ್ರು. ಅಯ್ಯ ಬಿಡುವಿನ ಕೊಳವೇಲಿ ಧೂಳಿಹಾಕಿ. ಪಂಡಿತ್ರು ಹೇಳ್ದ್ಹಂಗೆ, ಎತ್ತಿನ ಬಾಯಿಗಿಟ್ಟು, ಊದುಕ್ಕೆ ಅಂತ ಇತ್ತಕಡೆ ಬಾಯಿ ಬಿಚ್ಚಿ ಮಡಗಿದ. ಆದರೆ ಆ ಹಾಳು ಎತ್ತೇ ಮೊದಲು ಜೋರಾಗಿ ಊದುಬಿಡ್ತು!!



"ಅಧ್ಯಕ್ಷರನ್ನ ಕಂಡೇ ಅಂತ ನೀನು ಸೊಂಡಿಲೇರಿಸಿ ಜಂಭ ಮಾಡೋದು ಬಿಡು... ಅವತ್ತು ಖೆಡ್ಡದೊಳಗೆ ಸಿಕ್ಕಿಬಿದ್ದು ಅನುಭವಿಸಿದ್ದು ಮರೆತು ಹೋಯಿತಂತ ಕಾಣುತ್ತೆ ನಿಂಗೆ!"

ನನ್ನ ಬ್ಯಾಂಕ್ ವ್ಯವಹಾರ

ನನಗೆ ಮೊದಲಿಂದಲೂ ಹೀಗೇನೇ ಕಟಕಟೆ, ಕಂಬಿಸಾಲು, ಕೆಂಪು ಷಾಯಿ, ಕನ್ನಡಕ, ನಶ್ಯದಡಬ್ಬಿ ಹಸುರುಕಾಗದ, ಕ್ಯಾಷಿಯರ್ ಎಂಬ ಕೊಳ್ಳಿ ದೆವ್ವ ಇವೆಲ್ಲಾ ಕಂಡರೆ ಮೈ ಪರಚಿಕೊಳ್ಳುವಂತಾಗುತ್ತೆ. ಬೋನೊಳಗಿನ ಪ್ರಾಣಿಗಳ ಸಹವಾಸ ಅಪಾಯಕಾರಿ ಎಂದೆನಿಸುತ್ತೆ.

ಆದರೂ ಗ್ರಹಚಾರ ನೋಡಿ ಹೊಸ ಪ್ರಜಾಪ್ರಭುತ್ವದಲ್ಲಿ ನನ್ನಥಂವನಿಗೂ ಬಡಿಯಿತು. ಸರ್ಕಾರ ನನಗೆ ಸಂಬಳ ಹೆಚ್ಚುಮಾಡಿತು! ಹೆಚ್ಚಿನ ಸಂಬಳವನ್ನು ನಾನು ವಿಧಿಯಿಲ್ಲದೆ ಬ್ಯಾಂಕಿನಲ್ಲಿಡಲೇ ಬೇಕಾಯಿತು! ಯತ್ನವಿಲ್ಲದೆ ಬ್ಯಾಂಕಿಗೆ ಹೋದೆ. ಬೋನೊಳಗೆ ಸಾಲಾಗಿ ಕೂತಿದ್ದರು ಒಂದು ಹಿಂಡು! ಅವರನ್ನು ಬಲು ತುಚ್ಛವಾಗಿ ನೋಡಿದೆ. ಹೊಸದಾಗಿ ಖಾತೆ ತೆಗೆಯಬೇಕಾದವ ನಾನು. ಮ್ಯಾನೇಜರನ್ನೇ ಕಾಣುವುದು ಒಳ್ಳೆಯದು ಎಂದೆನಿಸಿತು ನನಗೆ. ಹಾಗೇ ಕಂಬಿ ಸಾಲಿನ ಮುಂದೆ ಒಂದು ನಿಮಿಷ ಠಳಾಯಿಸಿದೆ. "ಅಕೌಂಟೆಂಟ್" ಅಂತ ಒಂದು ಕಂಬಿ ಹತ್ತಿರ ಬರದಿತ್ತು. ಅಕೌಂಟೆಂಟ್ ತುಂಬಾ ಕುಳ್ಳ. ಮೇಜಿನ ಮೇಲೆ ಹತ್ತಿ ಭಾರಿ ಭಾರಿ ಪುಸ್ತಕಗಳನ್ನು ಕೆಳಕ್ಕಿಳಿಸುತ್ತಿದ್ದ. ಒಳ್ಳೆ ಸರ್ಕಸ್ ಕಂಪೆನಿಗೆ ಲಾಯಕ್ಕಾದ ಇಸುಮು. ಈತನ ಸಹಾಯವನ್ನು ಪಡೆದರೆ ಸುರಕ್ಷಿತ ಎಂದು ಆತನನ್ನು ಮಾತಾಡಿಸಹೋದರೆ ಬಾಯಲ್ಲಿ ಮಾತೇ ಬರದು. ತುಂಬಾ ಆತ್ಮೀಯರಿಗೆ ಸಂತಾಪ ಹೇಳುವಾಗ ಆಗುವಂತೆಯೇ ಗಂಟಲಿಲ್ಲ ಒತ್ತಿಕೊಂಡು ಬಂತು ಕೀಚಲು ಧ್ವನಿಯಲ್ಲೇ ಕೇಳಿದೆ.

" ಮ್ಯಾನೇಜರನ್ನು ನೋಡಬಹುದೆ ಸಾರ್....ಒಬ್ಬನೇ " ಎಂದು.

" ಓ ಹೋ ...ನೋಡಬಹುದು" ಎನ್ನುತ್ತಾ ಆತ ನನ್ನನ್ನು ದೂರದ ಕೊಠಡಿಯೊಂದಕ್ಕೆ ಕರೆದುಕಂಡುಹೋಗಿ ಮ್ಯಾನೇಜರನ್ನು ತೋರಿಸಿದ.

ನಾನು ಕೊಠಡಿಯೊಳಕ್ಕೆ ಹೋದಾಗ ಮ್ಯಾನೇಜರು ಒಂದು ಭಾರಿ ಗುಣಾಕಾರದ ಲೆಕ್ಕ ಮಾಡುತ್ತಿದ್ದರು. ಅದು ಹೇಗೆ ಗೊತ್ತಾಯ್ತು ಅಂದರೆ ಅವರು ಬ್ಯಾಂಕಿನ ನಗದಿ ಗುಮಾಸ್ತನು ಬರೆದಿಟ್ಟಿದ್ದ ಲೆಕ್ಕಗಳಮೇಲೆಲ್ಲಾ X ಗುರ್ತು ಹಾಕುತ್ತಿದ್ದರು! ಮ್ಯಾನೇಜರು ತುಂಬಾ ನಿಧಾನಸ್ತನಂತೆ ಕಾಣಿಸಿದರು. ನಾನೇ

ಮಾತಾಡಿಸಿದೆ "ನೀವೇನೇ ಸಾರ್ ಮ್ಯಾನೇಜರು" ಅಂತ. "ಹೌದು" ಎಂದರು ಮ್ಯಾನೇಜರು.

"ನಿಮ್ಮನ್ನ ಸ್ವಲ್ಪ ಗುಟ್ಟಾಗಿ ಕಾಣಬೇಕಲ್ಲ ಸಾರ್" ಎಂದೆ.

"ಕಾನ್ಫಿಡೆನ್ಷಿಯಲ್ಲು ಅಂತ ಕಾಣುತ್ತೆ" ಎಂದರು.

"ಎಸ್....ಎಸ್" ಎಂದೆ.

ಬ್ಯಾಂಕಿನ ಹಿತದೃಷ್ಟಿಯಿಂದ ಏನೋ ರಹಸ್ಯ ಹೇಳಬಹುದು ನಾನು ಎಂದು ಮ್ಯಾನೇಜರು ನನ್ನ ಬಗ್ಗೆ ತುಂಬಾ ಗೌರವ ವ್ಯಕ್ತಪಡಿಸಿದರು.

"ಹೀಗೆ ಬನ್ನಿ" ಎಂದು ನನ್ನನ್ನು ನಿನ್ನೂ ಹತ್ತುಮಾರುದೂರ ಕರೆದು ಕೊಂಡು ಹೋಗಿ ಹತ್ತು ಮೆಟ್ಟಲಿಳಿಸಿ "ಇಲ್ಲಿ ನೀವು ನಿರ್ಭಯವಾಗಿ ಹೇಳ ಬಹುದು" ಎಂದರು. ನಾನೂ ಮ್ಯಾನೇಜರೂ ಕುರ್ಚಿಗಳಮೇಲೆ ಕೂತುಕೊಂಡೆವು. ಮ್ಯಾನೇಜರು ದೀಪ ಹಾಕಿದರು. ನಾನು ಸುತ್ತಲೂ ನೋಡಿದೆ.

"ಯಾರೂ ಇಲ್ಲ. ಧೈರ್ಯವಾಗಿರಬಹುದು" ಎಂದರು.

"ಹಾಗೆ....ಯಾರಿಗೂ ಕೇಳಿಸುಲ್ಲವೆ?" ಎಂದೆ, ಏನು ಹೇಳಬೇಕೆಂಬುದು ತೋಚದೆ.

ಅವರೇ ಎತ್ತಿದರು "ನೀವು ರಾಮಮೂರ್ತಿ ಕಡೆಯುವರೆ?"

"ಛಿ! ಛಿ! ರಾಮಮೂರ್ತಿ ಕಡೆಯುವನಲ್ಲ" ಎಂದೆ.

"ಹಾಗಾದರೆ ತಾವು?"

"ನಾವು ಸಂಪೂರ್ಣವಾಗಿ ಅವರ ವಿರುದ್ಧ....ನಮ್ಮದು ಬೇರೆ ಏಜನ್ಸಿ"

"ಹೇಳಬಹುದಲ್ಲ" ಎಂದರು ಮ್ಯಾನೇಜರು.

"ನಿಜ ಹೇಳಬೇಕೆಂದರೆ ನಾನು ಪತ್ತೆದಾರನಲ್ಲವೇ ಅಲ್ಲ" ಎಂದೆ.

"ಮತ್ತೆ ಗುಟ್ಟಿನ ವಿಷಯ"

"ನಾನು ಹೊಸದಾಗಿ ನಿಮ್ಮ ಬ್ಯಾಂಕಿನಲ್ಲಿ ಒಂದು ಅಕೌಂಟ್ ಓಪನ್ ಮಾಡ್ಬೇಕು ಅಂತಿದೀನಿ ನನ್ನ ಹಣವನ್ನೆಲ್ಲಾ ನಿಮ್ಮ ಬ್ಯಾಂಕಿನಲ್ಲೇ ಇಡ್ತೇನೆ" ಎಂದೆ.

ಮ್ಯಾನೇಜರ ಮುಖ ಸ್ವಲ್ಪ ಸಡಿಲವಾಯಿತು. ಭಯ ಗಾಬರಿ ಎಲ್ಲಾ ಮಾಯವಾಗಿ ತುದಿಯಂಚಿನಲ್ಲಿ ಕಿರುನಗೆ ಮಿಂಚಿತು! ಸೇವಾಕಾತುರತೆಯಿಂದ ನನ್ನಕಡೆ ವಾಲಿದರು! ನನ್ನನ್ನು ರಾಕ್‌ಫೆಲ್ಲರ್ ಗೋತ್ರೋದ್ಭವನೆಂದು ಭಾವಿಸಿರ ಬೇಕು ಆತ.

" ಭಾರಿ ಹಣ ಎಂದು ಕಾಣುತ್ತೆ " ಎಂದರು.

" ಹೂ ! ಸುಮಾರಾಗಿ ಭಾರಿಯೇ ಎಂದು ಭಾವಿಸುತ್ತೇನೆ" ಎಂದೆ.

" ಎಷ್ಟು ? ಎಷ್ಟು ? " ಎಂದು ಕಿವಿಯಲ್ಲುಸುರಿದರು ಮ್ಯಾನೇಜರು.

" ಈಗ 16 ರೂಪಾಯಿ ಹಾಕ್ತೇನೆ ಸಾರ್....ಮುಂದಿನ ತಿಂಗಳಿಂದ ಪ್ರತಿ ಮಾಹೇನೂ ತಪ್ಪದೆ ಹತ್ತು ರೂಪಾಯಿ ಕೊಡ್ತಾ ಬರ್ತೇನೆ" ಎಂದೆ.

ಏನಾಯಿತೋ ಏನೋ ' ತಥ್ ' ಅಂತ ಎದ್ದರು ಕುರ್ಚಿಯನ್ನು ಒದ್ದು ಮ್ಯಾನೇಜರು! ಈ ವಾಕ್ಯದಂತೇನೇ ಮ್ಯಾನೇಜರು ಎದ್ವಾತದ್ವಾ ಒಂದು ನಿಮಿಷ ಕೊಠಡಿಯೊಳಗೆ ಚೇಳು ಕುಟಿಕಿದವರಂತೆ ಒದ್ದಾಡಿದರು. ಕೂಗಿ ಹೇಳಿದರು " ಸಾಂಬಮೂರ್ತಿ ಈತ ಅಕೌಂಟ್ ಓಪನ್ ಮಾಡ್ತಾನಂತೆ. ಈಗ 16 ರೂಪಾಯಿ ಹಾಕ್ತಾನಂತೆ. ಮುಂದಿನ ತಿಂಗಳಿಂದ ಹತ್ತು ಹತ್ತು ಹಾಕ್ತಾನಂತೆ" ಎಂದು ನಾನೂ ಎದ್ದೆ. ಇದ್ದಕ್ಕಿದ್ದಂತೇ ಕಬ್ಬಿಣದ ಬಾಗಿಲು ತೆಗೆಯಿತು. ನಾನು ಗಾಬರಿ ಯಿಂದ ಬಾಗಿಲು ತೆಗೆದ ತಕ್ಷಣ ಒಳಕ್ಕೆ ನುಗ್ಗಿದೆ.

" ಈಚೆಗೆ ಬನ್ರಿ, ಅದಲ್ಲದಾರಿ. ಅದು ಖಜಾನೆ" ಅಂತ ಮ್ಯಾನೇಜರು ಹೇಳಿ ಬೇರೆ ಬಾಗಿಲನ್ನು ತೋರಿಸಿದರು.

ನಾನು ಸಭ್ಯನಂತೆ ಹೊರಕ್ಕೆ ಬಂದೆ. ಅಕೌಂಟೆಂಟ್ ಸಾಂಬಮೂರ್ತಿ ಸಿದ್ಧವಾಗಿ ಕೂತಿದ್ದ. ಜೇಬಿನಿಂದ ಹದಿನಾರು ರೂಪಾಯಿ ತೆಗೆದು ಆತನ ಮುಂದೆ ಹಾಕಿದೆ.

" ಡಿಪಾಜಿಟ್ ಮಾಡಿ ಸಾರ್ " ಎಂದೆ.

ಸಾಂಬಮೂರ್ತಿ ಹಣವನ್ನು ಕ್ಯಾಷಿಯರ್‌ಗೆ ಕೊಟ್ಟು ಯಾವುದೋ ಪುಸ್ತಕಕ್ಕೆ ನನ್ನ ರುಜು ಹಾಕಿಸಿಕೊಂಡ. ರುಜುಮಾಡುವಾಗ ನನಗೆ ಬಹು ದುಃಖವಾಯ್ತು. ಬೋನೊಳಗಿದ್ದವರೆಲ್ಲಾ ವಕ್ರ ವಕ್ರವಾಗಿ ನನ್ನನ್ನೇ ನೋಡುತ್ತಿದ್ದರು. ಅಂತರಿಕ್ಷ ಯಾನವನ್ನು ಮಾಡಿದ ಚಿಂಪಾಂಜಿಯ ಮುಖಗಳಂತೆ ಅವರು ಮೆರೆದರು.

" ಡಿಪಾಜಿಟ್ ಆಯ್ತೆ ಸಾರ್ " ಎಂದೆ.

" ಓಹೋ....ಆಯ್ತು " ಎಂದ ಸಾಂಬಮೂರ್ತಿ.

" ಕೊಂಚ ಹಣ ಡ್ರಾ ಮಾಡಬೇಕಲ್ಲ ಸಾರ್ " ಎಂದೆ.

" ಇವರಿಗೆ ಚೆಕ್ ಬುಕ್ ಕೊಡೊ ರಾಮಯ್ಯ" ಎಂದ ಸಾಂಬಮೂರ್ತಿ ಪಕ್ಕದ ಕಿಟಕಿಯಲ್ಲಿ ಕೂತಿದ್ದ ಇನ್ನೊಬ್ಬ ಗುಮಾಸ್ತನು ನನಗೆ ಚೆಕ್ ಬರೆಯುವ ವಿಧಾನವನ್ನು ಉಪದೇಶಮಾಡಿದನು.

ಚೆಕ್ ಬರೆದು ರುಜು ಎಳೆದೆ. ಕಿಟಕಿಯಲ್ಲೋ ತೂರಿಸಿದೆ. ಸಾಂಬಮೂರ್ತಿ ಚೆಕ್ ನೋಡಿ ತತ್ತರಿಸಿಹೋದ. ಕಿರುಗುಟ್ಟುತ್ತಾ ನಮ್ಮ ಮೇಸ್ಟರ ಹಾಗೆ

ಬಿಕ್ಕಳಿಸುತ್ತಾ "ಪ್ರೂ....ಪೂರ್ತಿ....ಹ....ಣಾನ ಡ್ರಾ....ಡ್ರಾ....ಮಾಡ್ತೀ....ರ" ಅಂದ. ಆಗಲೇ ನನಗೂ ನನ್ನ ಅವಿವೇಕ ಅರ್ಥವಾಗಿದ್ದು. ವಾಸ್ತವವಾಗಿ ನಾನು ಡ್ರಾಮಾಡಬೇಕೆಂದಿದ್ದುದು ಆರೇ ರೂಪಾಯಿಗಳನ್ನು ಆದರೆ ನನ್ನನ್ನೇ ಮರಳು ಮಾಡಿದಂತೆ ಆಗಿತ್ತು. ಅರಿವಿಲ್ಲದಂತೆಯೇ ಹದಿನಾರು ಅಂತಲೇ ಬರೆದಿದ್ದೆ. ಸಾಂಬಮೂರ್ತಿಗೆ ಏನು ಉತ್ತರ ಕೊಡಬೇಕೋ ತೋಚಲಿಲ್ಲ. ಎಂಥ ಉತ್ತರ ಹುಡುಕಿದರೂ ಸಮಂಜಸವಾಗುಲ್ಲ ಬ್ಯಾಂಕಿನ ನೌಕರರೆಲ್ಲಾ ಪೇನಾಗಳನ್ನು ಕೆಳಗಿಟ್ಟು ನನ್ನನ್ನೇ ನೋಡಲು ಪ್ರಾರಂಭಿಸಿದ್ದರು. ಅಷ್ಟು ಹೊತ್ತಿಗೆ ನಾನೂ ಮೊಂಡು ಬಿದ್ದಿದ್ದೆ. ಬೇರೆ ಉಪಾಯವಿಲ್ಲ ಅರಿತ ಅಂತು ಅದನ್ನೇ ಒಂದು ಥರಹ ಗತ್ತಿನಿಂದ ಸಾಧಿಸಿಯೇಬಿಟ್ಟೆ. ನನಗೇನೋ ಬ್ಯಾಂಕಿನವರಿಂದ ಅಪಚಾರ ವಾಗಿರಬೇಕು ಎಂಬ ಅನುಮಾನ ಸಾಂಬಮೂರ್ತಿಗೆ ಉಂಟಾಗುವಂತೆ! ಸಾಂಬ ಮೂರ್ತಿ ಇನ್ನೂ ಆದುರುತ್ತಲೇ ಇದ್ದ ಮತ್ತೆ ಕೇಳಿದ.

"ಎಲ್ಲಾನೂ....ಹಿಂದಕ್ಕೆ"

"ಓಹೋ....ಅಷ್ಟನ್ನೂ"

"ಪೂರ್ತಿಯಾಗಿ"

"ಒಂದು ನಯಾಪೈಸಾನೂ ಬಿಡುಲ್ಲ"

"ಮುಂದಿನ ತಿಂಗಳಿಂದ ಹತ್ತು...."

"ಎಂದಿಗೂ ಸಾಧ್ಯವಿಲ್ಲ"

ಕ್ಯಾಷಿಯರ್ ಕಿಟಕಿಯಲ್ಲಿ ತಲೆಹಾಕಿ 'ನಂಬರ್ ಐದು" ಎಂದು ಕೂಗಿದ ನಾನು ಬಿಲ್ಲೆ ಸಮೇತ ಅವನ ಮುಂದೆ ಹಾಜರಾದೆ.

"ಚಿಲ್ರೆ ಕೊಡ್ಲೆ" ಎಂದು ಕ್ಯಾಷಿಯರು.

"ಬೇಡ ನಾನು ಕೊಟ್ಟಿದ್ದ ಬಂದಾನೇ ಕೊಡು" ಎಂದೆ.

ಅವ ಅದನ್ನೇ ತೆಗೆದು ಕೊಟ್ಟ. ಮನಸ್ಸಿಗೆಷ್ಟೋ ಹಿತವಾಯಿತು.

—ಹಾ. ರಾ.

(ಸ್ಟೀಫ್ ಹೆನ್ ಲೀಕಾಕ್‌ನ ಕಲಾಕೌಶಲ್ಯ ಸ್ವಾರಸ್ಯ ಅನುಭವಿಸಬೇಕಾದರೆ ಅತನ ಬರಹವನ್ನೇ ಓದಬೇಕು!)

ಧೀರ ಸೂರ

"ಹೆಪ್ಪುಗಟ್ಟಿತ್ತು ಕತ್ಲು-ಸೊಂಟದಲ್ಲಿದ್ದ ಕತ್ತಿಯಿಂದ ಆ ಕತ್ತಲನ್ನ ಕತ್ತರಿಸಿ ಕೊಂಡು ಮುಂದೆ ಹೋದೆ ನಭೋಮಂಡಲ ಮುಟ್ಟುವಂತಿದ್ದ ಪೆರಿ ಮರಗಳು-ದೂರದಲ್ಲೊಂದು ಗೂಗೆಯ ಕೂಗು-ಅಂತಹ ಭಯಂಕರ ರಾತ್ರಿಯನ್ನೇ ನಾನು ಕಂಡೆರಿಯೆ"

—ಎಂದು ಯಜ್ಞಪ್ಪನ ಹೋಟ್ಲಲ್ಲಿ ಮಾಮೂಲಾಗಿ ಸಂಜೆ ಸೇರಿದ ಸಭೆಯಲ್ಲಿ ಹೇಳಿದ ಸೂರಪ್ಪ. ನಿತ್ಯ ನಮ್ಮಗಳ ಆಟ ಮುಗಿದ ಮೇಲೆ ಯಜ್ಞಪ್ಪನ ಹೋಟ್ಲಲ್ಲೇ ದಣುವಾರಿಸಿಕೊಂಡು ಹರಟೆ ಕೊಚ್ಚುವುದು ಹತ್ತಾರು ವರ್ಷಗಳ ಅಭ್ಯಾಸ. ಈ ಈ ಸೂರ ಆಗಿಂದಾಗ್ಗೆ ಬರುವ ಮತ್ತೆ ಮಲ್ನಾಡಲ್ಲಿ ಮಾವನ ಮನೆ ಅಂತ ಮಾಮೂಲಾಗಿ ಮೂಡುಗೆರೆ ಹೋಗುವ. ಹೀಗೆ ಅವ ಮೂಡ್ಗೆರೆಯಿಂದ ಬಂದಾಗಲೆಲ್ಲಾ ತನ್ನ ಸಾಹಸದ ಕಥೆ ಹೇಳುತ್ತಲೇ ಇರುವವನು. ಅವನ ಮಾತು ಬಹು ಸೊಗಸು ಮಾತಾಡೋ ಹಾಗೇ ಬರೆದಿದ್ದರೆ ಅವನೊಬ್ಬ ಮಹಾ ಸಾಹಿತಿ ಆಗಿಬಿಡ್ತಿದ್ದ. ಈಗ ಇರುವ ಮಹಾಸಾಹಿತಿಗಳ ಹಿತದೃಷ್ಟಿಯಿಂದ ಅವ ಹಾಗೆ ಮಾಡಿಲ್ಲ.

"ಎಡ ಹೆಗಲಿಗೆ ನೀರಿನ ಬಾಟ್ಲಿ-ಬಲ ಹೆಗಲಿಗೆ ಬಂದೂಕು-ಕೈಯಲ್ಲಿ ಬಾಕು ಸೊಂಟದಲ್ಲಿ ಕತ್ತಿ ತಲೆಮೇಲೆ ಬುಕ್ತಿ-ಮೂರು ದಿನ ಹಲ್ಡಿದ್ದೀನಿ ಆ ಹುಲಿಗಾಗಿ ಸಿಕ್ಕಲಿಲ್ಲ-ಇದ್ದಕ್ಕಿದ್ದ ಹಾಗೆ ಕಿಟಾರನೆ ಕಿರಿಚಿದ ಹಾಗಾಯ್ತು-ಹಿಂದಕ್ಕೆ ಸರಿದೆ. ನರಿಯೊಂದು ಓಡಿಹೋಯಿತು. ಜೋಲು ಬಾಲದ ಹಕ್ಕಿ ನಕ್ಕಿತು-ಹಾಗೇ ನಿಂತು ನೋಡಿದೆ....ಹುಲಿ ಮಲಗಿದೆ!!"

ಎಂದು ಒಂದೇ ಉಸುರಿಗೆ ಹೇಳಿದ.

—ಅಬ್ಬ ಎಂದು ನಾವು ಬೆವರೊರಸಿಕೊಂಡೆವು. ಕೆಲವರು ಬೆಚ್ಚಿದರು.

"ಸಮಯವೇ ಇಲ್ಲ-ಶೊಂಟದದಿಂದ ಕತ್ತಿ ಹಿರಿದು ಹೋರಾಡಿದೆ-ಬಾಲ ಕತ್ತರಿಸಿ ಒಗೆದೆ-ಕಾಲು ತುಂಡರಿಸಿದೆ-ಹೊಟ್ಟೆಗೆ ತಿವಿದೆ-ಅಬ್ಬ ಅಂತಹ ಹೋರಾಟ ಕಲ್ಪನೆಗೂ ಅಸಾಧ್ಯ"

—ಎಂದು ದಂ ಎಳೆದ ಸೂರಪ್ಪ.

"ಎದುರಾ ಎದುರ ಹುಲಿ ಜೊತೆ ಹೋರಾಟ ಅಂದ್ರೆ ಬಹಳ ಧೈರ್ಯ-ಅನುಭವ-ಇರಬೇಕು" ಎಂದು ಟೀ ಗುಟಕರಿಸಿ ಗುಂಡಣ್ಣನೋರು ಕೇಳಿದರು. "ಬಾಲ-ಹೊಟ್ಟೆ-ಕಾಲು-ಇವುಗಳಿಗೇ ಕತ್ತಿಯಿಂದ ತಿವಿದ ಶೂರ ಸೂರಪ್ಪನೋರೇ.... ಆ ಹುಲಿಯ ಕತ್ತನ್ನು ತುಂಡರಿಸಲಿಲ್ಲವೋ ..."

"ಒಳ್ಳೇ ಮಾತು ಕೇಳಿದಿರಿ ಗುಂಡಣ್ಣ....ಅದಕ್ಕೆ ಕತ್ತು ಇದ್ದಿದ್ದರೆ ಕತ್ತರಿಸದೆ ಬಿಡ್ತಿದ್ನಾ!!!"–ಎಂದು ಇನ್ನೊಂದು ದಂ ಎಳೆದ ಸೂರಪ್ಪ.

ದಾಶರಥೀ ದೀಕ್ಷಿತ್.

ಕೆಂಬೂತ ಪುಕ್ಕ ತೆರೆದಾಗ

ನವಿಲು ಕುಣಿಯೋದನ್ನ ಕಂಡು ಕೆಂಬೂತ ಪುಕ್ಕ ತೆರೆದು ಕುಣಿಯೋದಕ್ಕೆ ಷುರು ಹಚ್ಚಿದ್ದನ್ನ ಕೇಳಿಲ್ವೆ? ಇದು ಹೇಗಿದೆ ನೋಡಿ.

* * * * *


" ಬಹಳ ಸೊಗಸಾದ ಮುಂಜಾನೆ....ಕಾಫಿಗೆ ನೀರು ಕುದೀತಾ ಇದೆ.... ಕಾಫಿಪುಡಿ ಡಬ್ಬ ತೆಗೆದಿಟ್ಟರು ಅಮ್ಮ...ಆ ಹಾ! ಪರಿಮಳ ಮ್ಯಾಗ್ನಿಫಿಸೆಂಟ್ ಕಾಫೀದು. ಬೇಕಾಗಿರೋದು ಹಾಲು ಮಾತ್ರ....ಹಾಂ ನಿಮ್ಮನ್ನ ಕೊಟ್ಟಿಗೆಗೆ ಕರೆದುಕೊಂಡು ಹೋಗುತ್ತೇನೆ. ವಾತಾವರಣ ಬಿಗಿಡಾಯ್ಸಿ ಕೊಂಡಿದೆ ಇಲ್ಲಿ... ಅಜ್ಜಿ ಹಾಲು ಹಿಂಡೋಕೆ ಸಿದ್ಧವಾಗ್ತಿದಾರೆ ಇಲ್ಲಿ....ಕೆಂಪಿ ಬಲು ತಂಟೆ ಆಕಳು.... ಹಗ್ಗ ಹಿಡಿದು ಜಗ್ತಾ ಇದೆ...ಮೂತಿಯಲ್ಲಿ ಬುಸ್ ಬುಸ್....ಅಜ್ಜಿ ಸೊಗಸಾದ ಹಸುರು ಹುಲ್ಲನ್ನ ಅದರ ಎದುರುಗಡೆ ಚೆಲ್ಲಿದರು....ಗರ್ಭಬಡಿದವರ ಹಾಗೆ ತಿನ್ನುತಾ ಇದೆ ಕೆಂಪಿ... ಬಲು ಖುಷಿ....ಹಾಂ....ಇದೇ ಸಮಯ ನೋಡಿ ಅಜ್ಜಿ ಹಾಲು ಹಿಂಡೋದಕ್ಕೆ ಷುರುಮಾಡಿದರು....ಇಲ್ಲ....ಇಲ್ಲ....ತಂಬಿಗೆ ಹಿಡಿದು ಕೂತಿದಾರೆ ಅಷ್ಟೆ....ಕೆಂಪಿ ಹಿಂಗಾಲು ಎತ್ತಿತು ...ರಪಾಂತ ಬಿದೀತು ...ಸ್ಪ್ಲೆಂಡಿಡ್ ಹೊಡೆತ.... ಆದರೆ ಮೊದಲನೆ ಪೆಟ್ಟು ಗೋಡೆಗೆ....ಅಜ್ಜಿ....ರುಸ್ತುಂ ಅಜ್ಜಿ....ಕೊಂಚ ಪಕ್ಕಕ್ಕೆ ಸರಿದು ಪೆಟ್ಟು ತಪ್ಪಿಸಿಕೊಂಡರು ...ಡಿಫೆನ್ಸಿನಲ್ಲಿ ಮತ್ತೆ ಹಾಲುಹಿಂಡೋದಕ್ಕೆ ಕೈ ಹಾಕಿದಾರೆ....ಕೆಂಪಿ ಯಾಕೋ ಮೂಗಿನ ಹೊಳ್ಳೆ ಅರಳಿಸ್ತಾ ಇದೆ....ಬಹಳ ಸ್ವಾರಸ್ಯ ಇದೆ ಈಗ....ಅಗೋ ...ಅಗೋ....ಅಗೋ ಠಪಾರ....ಇನ್ನೊಮ್ಮೆ ಬಿಗೀತು ಕೆಂಪಿ ...ಈಸಲ ಸ್ಟೇಡಿಯಂ....ಅಲ್ಲ....ಕೊಟ್ಟಿಗೇಲಿರೋ ನಲವತ್ತು ಸಾವಿರ ಜನ.... ಅಲ್ಲ ...ಸೊಳ್ಳೆಗಳು ಝೊಂಯ್ ಅಂತ ಜಯ ಕಾರ ಮಾಡುತ್ತ ಹಾರಾಡ್ತಿವೆ.... ತಂಬಿಗೆ ಮೂರು ಮಾರು ದೂರ ಹೋಗಿ ಬಿದ್ದಿದೆ...ಅಜ್ಜಿ ಶಪಿಸ್ತಿದಾರೆ ಕೆಂಪೀನ ಮಾತ್ರವಲ್ಲ ...ನನ್ನ ಕೂಡ ಈ ಹೊಡೆತಕ್ಕೂ ಅಜ್ಜಿ ಮರಿ ಮಾಡ್ಕೊಂಡಿಲ್ಲ ... ಪುನಃ ತಂಬಿಗೆ ಎತ್ತಿಕೊಂಡು ಬಂದರು ...ನಡೆಯೋ ಆಚೆಗೆ ಅಂತ ಗದರಿಸ್ತಿದಾರೆ ನನ್ನ ...ನನ್ನ ಕಮೆಂಟ್ರಿ ಅವರಿಗೆ ಹಿಡಿಸೋದಿಲ್ಲ ...ಸರಿಮಾ ಇಲ್ಲ....ಅಗೋ ಮತ್ತೆ ಹಾಲು ಹಿಂಡೋದಕ್ಕೆ ಪ್ರಾರಂಭಿಸಿಯೇ ಬಿಟ್ಟರು....ಇದೇನು ಕೆಂಪಿ ಇಷ್ಟೊಂದು ಟೇಮಾಗಿ ನಿಂತಿದೆ! ಶಾಂತಮೂರ್ತಿ!....ಏನೋ ಪ್ಲಾನಿರಬೇಕು....ಕಣ್ಣು ಬೇರೆ

ಅರ್ಥ ಮುಚ್ಚಿಕೊಂಡಿದೆ ..ಬಕಧ್ಯಾನ?....ಆಹಾ ಎಂಥ ಬಿಳಿ ಹಾಲು ...ಧಾರಿ ಧಾರೆಯಾಗಿ ತಂಬಿಗೆಗೆ ಬೀಳ್ತಾ ಇದೆ....ಸ್ಪ್ಲೆಂಡಿಡ್ ಸಾರ್....ಸ್ಪ್ಲೆಂಡಿಡ್ಡು....ಅಜ್ಜಿ ನಂಗೆ ಬೈತಾನೇ ಹಾಲು ಹಿಂಡಿದರು ...ತಂಬಿಗೆ ತುಂಬುತಾ ಬಂತು ... ಘಟನೆಗಳೇನೂ ಇಲ್ಲ ...ಕೆಂಪಿ ಬಾಲ ಆಡಿಸ್ತಾ ಇದೆ ...ಆದರೆ ...ಆದರೆ....ಕೆಂಪಿ ಕಾಲು ಕೊಂಚ ಎತ್ತಿತು....ಅಗೋ ಬಂತು ಹೊಡೆತ....ಮ್ಯಾಗ್ನಿಫಿಸೆಂಟ್ ಸಾರ್ ಮ್ಯಾಗ್ನಿಫಿಸೆಂಟ್....ತಂಬಿಗೆ ಹತ್ತು ಗಜ ಆಚೆ ಬಿದ್ದಿದೆ ...ಕೊಟ್ಟಿಗೆ ತುಂಬ ಹಾಲು ಅಜ್ಜಿ ಎದ್ದುಬಿಟ್ಟು ಕೈಯಿಂದ ಸಗಣಿ ಕೊಡವಿಕೋತಿದಾರೆ....ಕೆಂಪಿ ಬುಸ್ ಬುಸ್ ಅಂತ ಇದ್ದ ಹಾಗೆ ಅಜ್ಜಿ ಅದಕ್ಕೆರಡು ಹೇರಿದರು....ಬಲು ಕೋಪ ಬಂದಿದೆ ಅವರಿಗೆ ...ನನ್ನ ಕಡೆಗೆ ಧಾವಿಸ್ತಾ ಇದಾರೆ....ಇಲ್ಲಿಂದ ಕಂಬಿಕೀಳದೆ ಉಪಾಯವಿಲ್ಲ ಕ್ಷಮಿಸಿ....ಕಮೆಂಟ್ರಿ ಇಲ್ಲಿಗೇನೇ ಮುಗೀತು...."

* * * * *

ಕಮೆಂಟ್ರಿ ಕೇಳಿ ಕೇಳಿ ಈ ಹುಡುಗರು ಆಗಿದ್ದು ನೋಡಿದಿರಾ ಶುದ್ಧ ಕೆಂಬೂತಗಳ ಹಾಗೆ ಅನುಕರಿಸಿದಾವೆ ಏನು ಮಾಡಬೇಕು ಇದಕ್ಕೆ !

—ರಾಮಿ



"ಸ್ವಾಮಿ ದಯವಿಟ್ಟು ಈ ಸೀರೇನ ವಾಪಸ್ ತೊಗಳ್ತೀರ"

ತೆಗೆದು ತೊಟ್ಟೆ ಬಿಟ್ಟೇನು

ನಮ್ಮ ನಾಲಿಗೆ ಏನೇನು ನುಡಿಸುತ್ತದೆ. ಆ ಭಗವಂತ ಈ ಮೆದುಳಿನಲ್ಲಿ ಏನೇನನ್ನು ತಂದು ತುರುಕುತ್ತಾನೆ, ಹೇಗೆ ಹೇಗೆ ಇದು ಓಡೀತು, ಎಂದು ಹೇಳಲು ಸಾಧ್ಯವಿಲ್ಲ. ಲೂಸಾದ ನಟ್ಟುಗಳಿಗೆ ಸರಿಯಾದ ಬೋಲ್ಟು ಒದೆ ಬಿದ್ದಮೇಲೂ ಬರುವುದೋ ಇಲ್ಲವೋ ಅನುಮಾನ.

ಮೊನ್ನೆ ಹೋಟಲಿಗೆ ಊಟಕ್ಕೆ ಹೋದಾಗ, ವಿನೋಬಾ ಭಕ್ತರೊಬ್ಬರು ತಮ್ಮ ಗುರುವನ್ನು ಹೊಗಳುತ್ತಿದ್ದರು. ನನ್ನಷ್ಟಕ್ಕೆ ನಾನು ಸುಮ್ಮನಿದ್ದೆ. ಅವರು ಹಾಗೆ ಅವರು ಹೀಗೆ, ಭೂದಾನ, ಗೋದಾನ, ಜೀವದಾನ, ಬುದ್ಧಿದಾನ, ವಿವೇಕದಾನ ಎಲ್ಲಾ ಮಾಡುತ್ತಾರೆ ಅವರಂಥವರು ಇನ್ನಿಲ್ಲ. ಆಗುವುದೂ ಇಲ್ಲ, ಎಂದೆಲ್ಲಾ ಹೊಗಳಿ ಅವರಿಂದಲೇ ಲೋಕೋದ್ಧಾರ ಎಂದರು. ಸುಮ್ಮನೇ ಊಟಮಾಡುತ್ತಿದ್ದೆ.

‘ ಹೌದೋ ಏನಲ್ಲೋ, ನೀವಾರೂ ಹೇಳ್ರೀ ’ ಎಂದರು.

‘ ಹೌದು ಹೌದು ’ ಎಂದು ನಾನು ಸುಮ್ಮನಾಗಲಿಲ್ಲ.

‘ ಸರ್ವೋದಯ ಇಲ್ಲಿ ಏನೇನು ಮಾಡಿತು ನಿಮಗೇ ಗೊತ್ತು. ನೈಲಾನ್ ಸೀರೆ ಹಾಗೆ, ವಿನೋಬಾನ ಹೊಗಳುವುದೂ ಇತ್ತೀಚಿನ ಫ್ಯಾಷನ್ ಅಲ್ಲವೇ? ಅಂಥವರು ಇನ್ನೆಲ್ಲಿ ಇರಲು ಸಾಧ್ಯ? ತನಗೂ ಪರರಿಗೂ ಏನೂ ಅನುಕೂಲ ವಲ್ಲದ್ದನ್ನ ಯಾರುತಾನೇ ಮಾಡಲು ಹೋಗುತ್ತಾರೆ? ಸರ್ವೋದಯ ಜನತೆಗೆ ಬೇಕಿಲ್ಲ ಎಂದು ಪಂಜಾಬಿನಲ್ಲಿ ತಿಳಿದೂ ತಿಳಿದೂ, ಜೋಜಿಲಾ ಕಣಿವೆಯಲ್ಲಿ ಹಿಮ ರೋಗ ಹಿಡಿದೂ ಹಿಡಿದೂ, ಮಧ್ಯಪ್ರದೇಶದ ಕಳ್ಳರನ್ನೆಲ್ಲಾ ಉದ್ಧಾರ ಮಾಡಲು ಹೋಗಿ ಕೈಸುಟ್ಟುಕೊಂಡೂ, ಇನ್ನೇಕೆ ಅವರು ಹೀಗೆ ಮಾಡುತ್ತಿದ್ದಾರೆ? ಅಶ್ಲೀಲ ಭಿತ್ತಿಪತ್ರ ಹರಿದರೆ ಅಶ್ಲೀಲ ಕಡಿಮೆಯಾಗುವುದೇ? ಆತ್ಮೋದ್ಧಾರ ಮಾಡಿ ಕೊಳ್ಳುವುದರಲ್ಲಿ ಅವರೇಕೆ ಮನ ಮಾಡಲಿಲ್ಲ. ‘ ತನ್ನ ಕಾರಿಯ ಕಾರಣವ ನರಿದನ್ನಿಯರ ಚಿಂತೆಯನುಮಾಡುವುದುನ್ನತಿಕೆ ತಾನಲ್ಲ ನೀತಿಜ್ಞರಿಗೆ ’. ಹೌದೋ ಅಲ್ಲವೋ? ನಮ್ಮ ಕನ್ನಡ ಪ್ರಹಸನಗಳು ಇದರ ಮುಂದೆ ಏನೂ ಇಲ್ಲ. ಹೌದೋ ಅಲ್ಲವೋ ಹೇಳಿ, ಹೇಳಿ?” ಎಂದು ನಾನವರನ್ನು ಕೇಳಿದೆ.

' ಇಂಥ ಕಕವರು ಭಾಳಜನಸಾರೀ. ನಿಮಗೆ ಯೋಗ್ಯತೆ ಇಲ್ಲದಿದ್ರೆ ಅವರ ನ್ಯಾಕ್ರೀ ಬೈತೀರಿ. `ನಮ್ಮ ಗುರುಗಳ ಕಾಲು ಹಿಡಿಯುವ ಯೋಗ್ಯತೆಯೂ ನಿಮಗಿಲ್ಲ. ನಿಮ್ಮ ಹತ್ರ ಏನು ಮಾತು" ಎಂದರು ಅವರು.

' ಯಾರ್‍ರೀ ನನ್ನ ಮಾತಾಡಿಸಿದ ಕಕವ? ವಿನೋಬಾನ ಬೈದೇನ್ರೀ ನಾನು? ನನಗೆ ಯೋಗ್ಯತೆ ಇಲ್ಲ ಎಂತ ನಿಮಗೆ ಹೇಗ್ರೀ ತಿಳೀತು? ನನ್ನಂಥ ಅಯೋಗ್ಯನ್ನ ಯಾಕ್ರೀ ಮಾತಾಡ್ಸಿದ್ರೀ. ಇನ್ನೊಂದ್ಸಾರಿ ನನ್ನ ಮಾತಾಡಿಸಿ ನೋಡ್ರೀ? ತೆಗೆದು ಕೊಟ್ಟುಬಿಟ್ಟೇನು. ಹುಷಾರ್' ಎಂದೆ.

* * * *

ಅದಾಗಿ ಎರಡು ದಿನ ಆಗಿರಬಹುದು. ರಾತ್ರಿ ೯ ಗಂಟೆ ಸಮಯ. ಹೋಟಲಿನಲ್ಲಿ ಊಟಮಾಡುತ್ತಿದ್ದೆ. ಸಾಹುಕಾರರೇ ಖುದ್ದಾಗಿ ಬಡಿಸುತ್ತಿದ್ದರು. ಮಾಣಿ ಚಕ್ಕರ್ ಕೊಟ್ಟಿದ್ದ.

ಬಂತು, ಆ ಸಾಮಿ. ಪಲ್ಯ ತಿನ್ನುತ್ತಾ ಆರಂಭಿಸಿತು.

' ಸಾಹುಕಾರ್‍ರೀ. ಇವತ್ತು ಆಫೀಸಿನಲ್ಲಿ ಭಾಳಕೆಲ್ಸ. ಹಾಳಾದ ಮ್ಯಾನೇಜರು,' ಎಂದ

' ಹೌದು ರಾಯ್ರೀ ನಿಮ್ಮ ಆಫೀಸು ಕೇಳಬೇಕೇ' ಎಂದರು ಹೋಟೆಲು ಸಾಹುಕಾರರು.

' ಸ್ಕೋರೆಷ್ಟಾಯಿತು' ಎಂದ.

' ಅದೇನೋ ಡ್ರಾ ಅಂತೆ, ರಾಯರೇ.'

' ಹೋಗಲಿ ಮರ್‍ಯಾದೆ ಉಳಿಸಿದರು.' ಎಂದ ಪ್ರಾಣಿ ನನ್ನ ಪಕ್ಕೆಯನ್ನು ತಿವಿದು ' ಹೌದೋ ಅಲ್ಲವೋ ರಾಯರೇ ?,' ಎಂದಿತು.

' ಯಾರ ಮರ್‍ಯಾದೆ ?' ಎಂದೆ.

' ಇಂಡಿಯಾ ದೇಶದ್ದು ಸೋಲಲಿಲ್ಲವಲ್ಲ. ಅಂತೂ ಪರವಾ ಇಲ್ಲ ನಮ್ಮ ಟೀಮು! ಏನಂತೀರಿ ?'

' ಏನು ಹೇಳಲಿ ಏನನ್ನಲಿ. ಕ್ರಿಕೆಟ್ಟಿನಲ್ಲಿ ದೇಶದ ಮರ್ಯಾದೆ ಎಲ್ಲಿಂದ ಬಂತು ?' ಎಂದೆ.

ಏನ್ರೀ ಇದರ ಮೇಲೇ ನಮ್ಮ ಗೌರವ, ಪ್ರತಿಷ್ಠೆ....?

' ಹಾಗಾದರೆ ನಮ್ಮದು ಮಾನಗೆಟ್ಟ ದೇಶವಾಯ್ತಲ್ಲ ? ಎಂದೆ.

' ನೀವು ದೇಶದ್ರೋಹಿಗಳು....ಎಂದ.

' ಅಲ್ಲರೀ, ವೆಸ್ಟಿಂಡೀಸ್, ಆಸ್ಟ್ರೇಲಿಯಾ, ಇಂಗ್ಲೆಂಡ್ ಕೈಲಿ ಯಾವ ಯಾವ ಭವಣೆ ಪಟ್ಟಿದೆ ನಮ್ಮ ಟೀಮು. ಅದೊಂದು ಟೀಮೋ ಎಂದು ಕೇಳುವ ಹಾಗಿದೆ. ಟೀಮಾಗಿದ್ದರೆ ಏನು ಆಡುತ್ತದೆ ಎಂದು ಕೇಳಬೇಕು ?'

‘ ನಿಮಗೆ ತಲೆ ಸರಿಯಿಲ್ಲ. ಉಮ್ರಿಗರ್, ಬೋರ್ಡೆ ಎಂಥೆಂಥ ಸೆಂಚುರಿ ಹೊಡೆದರು !

‘ ಅವರ ನಾರ್ಮಲ್ ಸ್ಕೋರ್ ನೋಡಬೇಕಾದರೆ ಹೋದ ವರ್ಷ, ಅದರ ಹಿಂದಿನ ವರ್ಷ ರಿಕಾರ್ಡು ಹುಡುಕಿ ನೋಡಿ, ಅವರು ಸೆಂಚುರಿ ಹೊಡೆಯಬೇಕಾಗಿದ್ದರೆ, ಇನ್ನೆಂಥಾ ಬೌಲಿಂಗಿಗೆ ಎಂದು ಯೋಚಿಸಿ ಆದುಬಂದ ಟೀಮಿಗೆ ಕಳಂಕವೇ ಹೊರತು, ನಮ್ಮ ಹಿರಿಮೆಗಲ್ಲ. ಅಲ್ಲದೆ 90 ಟೆಸ್ಟುಗಳಲ್ಲಿ ಕಡ್ಡಾಯವಾಗಿ ಸೆಲೆಕ್ಟ್ ಮಾಡುತ್ತಾ ಹೋದರೆ ಯಾರಾದರೂ, ನಾಲ್ಕಾರು ಸೆಂಚುರಿ ಬಾರಿಸಲೇಬೇಕು.

‘ ಏನಂತೀರಿ. ಹನೀಫ್, ಫಜಲ್, ಸಯೀದ್, ಇಂಟೆಕಾಬಾಲಂ ಎಂಥೆಂಥಾ ಆಟಗಾರರು ಅವರನ್ನು ಬೈತೀರಾ ’ ! ‘ ಯಾರ್ರೀ ಅವರನ್ನು ಬೈದರು. ಆದರೆ ಅಂಥಾ ಟೀಮು 13 ಮ್ಯಾಚುಗಳಲ್ಲಿ ಒಂದನ್ನೂ ಏಕೆ ಗೆಲ್ಲಲಿಲ್ಲ. ಯೋಚಿಸಿ. ಕುರುಬರೂರಲಿ ಗಾಜು ಮಾಣಿಕ. ’

‘ ಅಲ್ಲರೀ, ಎಲ್ಲರೂ ಅವರನ್ನು ಹೊಗಳುತ್ತಾರೆ. ಪಾಕೀಸ್ತಾನ್ ಟೀಮೇ ನಿಮಗೆ ಸುಮಾರಾದರೆ, ಇನ್ನೆಂಥಾ ಟೀಮು ಬೇಕು ದೇಶದಲ್ಲಿ ಎಷ್ಟು ಜನ ಕ್ರಿಕೆಟ್....’

‘ ಏನ್ರೀ ಕ್ರಿಕೆಟ್, ಕ್ರಿಕೆಟ್ ಅಂತೀರಿ. ಒಂದೊಂದು ಇನ್ನಿಂಗ್ಸ್ ಮುಗಿಸಲು ಹದಿನೈದು ದಿನ ಬೇಕು ಇವರಿಗೆ. ಅವರೂ ಅಷ್ಟೇ ಇವರೂ ಅಷ್ಟೇ ; ಷುರುವಿಗೇ ಡಿಫೆನ್ಸ್ ಕೊನೆಗೂ ಡಿಫೆನ್ಸ್ ಅಷ್ಟು ನಾಜೂಕು ಜನ ಆಟ ಏಕೆ ಆಡಬೇಕು ? ಅದನ್ನು ಜನರೇಕೆ ನೋಡಬೇಕು ? ಹೀಗೇ ಆಡ್ತಾ ಇರ್ಲಿ, ನಾಯಿಗಳೂ ಫೀಲ್ಡಿನಲ್ಲಿ ಬರುವುದಿಲ್ಲ.”

“ ಅಲ್ಲರೀ, exciting marvellous ಅಂತ ಕಾಮೆಂಟೇಟರು ಕೂಗ್ತಾ ಇರ್ತಾರೆ. ಎಷ್ಟು ಜನ ನೋಡಕ್ಕೆ ಹೋಗ್ತಾರೆ. ನೀವು ಈ ಊರಿನಲ್ಲೇ ಇದ್ದು ಅವರನ್ನು ಬೈತಿರಲ್ರೀ ? ನೀವು ಜನವೇನ್ರೀ ?”

“ ಅಲ್ಲ ಸ್ವಾಮೀ ದನ. ಏನು exciting ? Manjrekar narrowly escapes a stumping chance. The ball goes for two byes ಅಂದರಲ್ಲ ನಿಮ್ಮ ಕೊರೇಷಿ ಸಾಹೇಬರು, ಏನ್ರೀ ಅದರರ್ಥ ? The position is that oh, he hits the ball pitched on the off stick but misses the ball completely .. and it is over. ಆರು ಬಾಲಿನಲ್ಲಿ ಯಾವುದನ್ರೀ ಅವನು ಹೊಡೆದದ್ದು. ಒಂದು ಬಾಲಿನಲ್ಲಿ ಅರ್ಥಕ್ಕೆ ಹೇಳಿದರೆ ಸಾಕೇ ಒಂದು ಓವರಿಗೆ ! ಅಂಥವರು exciting ಅಂದ್ರೆ ಹೇಗ್ರೀ ನಂಬೋದು ? ಆಟ ಅಷ್ಟು ಎಕ್ಸೈಟಿಂಗ್ ಆಗಿದ್ರೆ, 5½ ಗಂಟೆ

ಬದಲು 5 ಗಂಟೆ ಆಟಾನೇ ಸಾಕು ಅಂತ ಯಾಕ್ರೀ ಅವರಂದ್ರು? ಇವರ್ಯಾಕೆ ಒಪ್ಪಿದ್ರು? ಪಿಚ್ ಮೇಲೆ ಫಜಲ್ ಮಾರ್ಕ್ ಮಾಡಿ ಅಂಪೈರುಗಳು ಛೀಮಾರಿ ಮಾಡಿದ್ದು. ಅದಕ್ಕೆ ಈ ಅಂಪೈರುಗಳೇ ಬೇಡ ಅಂತ ಅವರು ಒದರಿದ್ದು, ಇಷ್ಟೇ ನೋಡ್ರೀ ಎಕ್ಸೈಟೆಂಗ್, ಈ ಸೀರೀಸ್‌ನಲ್ಲಿ."

ಆ ಪ್ರಾಣಿ ತಲೆಕೆರೆದುಕೊಂಡು, ರೇಗಿ ಹೇಳಿತು 'ನಿಮ್ಮಂಥವರಿಂದಲೇ ನೋಡಿ ನಮ್ಮ ದೇಶಗಳಿಗಿದ್ದ ಮಧುರ ಬಾಂಧವ್ಯ ಕೆಡುವುದು.'

'ಹೌದು ನೋಡ್ರೀ, ನಿಮ್ಮಿಂದಲೇ ಅದು ಕೆಡದೆ ಉಳಿದದ್ದು. ಪಾಕೀಸ್ತಾನ್ ಪೇಪರುಗಳ ಬೊಬ್ಬಾಟೆ ತಮ್ಮಟೆ ಮಾಡಿದವರು ನೀವೇ ಅಲ್ಲವೇ? ಅವರು ವಿನಾಃಕಾರಣ ಉಗುಳಿದ್ದರೂ, ತೆಪ್ಪಗಿರುವ ಧೀರರು. ಅಂಥಾ ಬಾಂಧವ್ಯ ಅವರೇಕೆ ಹಾಗೆ ಬರೆದರು?'

'ಹೋಗ್ಲಿ ನಿಮ್ಮ ಹತ್ತಿರ ಏನು? ಕ್ರಿಕೆಟ್ ಎಂದರೇನು ನಿಮಗೆ ಗೊತ್ತಿಲ್ಲ.' ಎಂದ ಅವ.

'ನೀವು ಸರ್ವಜ್ಞರು! ಸ್ವಾಮೀ, ಸಿಲ್ಲಿಮಿಡಾನ್ ಅಂದ್ರೇನು? ಕವರ್ ಪಾಯಿಂಟ್ ಅಂದ್ರೇನು? ಲೆಗ್ ಟ್ರ್ಯಾಪ್ ಯಾವುದು? ಸ್ಲಿಪ್ ಅಂದರೇನು? ನೋಬಾಲ್ ಅಂದ್ರೇನು? ಟೈ ಅಂದ್ರೇನು. ಹೇಳ್ರೀ ನೋಡಣ? ಇವೊತ್ತು ಮೆಲ್‌ಬೋರ್ನ್‌ನಲ್ಲಿ ಎಷ್ಟ್ರೀ ಸ್ಕೋರಾಯ್ತು? ಬ್ರಾಡ್‌ಮನ್ ಯಾರ್ರೀ? ಮೆಕಿಫ್ ಯಾರ್ರೀ? ವ್ಯಾಕೆ...."

"ನಿಲ್ಲಿಸ್ರೀ, 'ಎಂದೊದರಿದ' ಕ್ರಿಕೆಟ್ಟಿಗೂ ವ್ಯಾಕೆಗೂ, ಕುರಿಗೂ ಏನು ಸಂಬಂಧ? ನನ್ನೇನೋ ನೀವು ಕೇಳಿದ್ರಲ್ಲಾ. ವ್ಯಾಕೆ ಅಂದ್ರೆಲ್ಲಾ ಅದಕ್ಕೂ ಕ್ರಿಕೆಟ್ಟಿಗೂ...."

'ಹಾಲ್....' ಎಂದು ಮುಂದುವರಿಸಿದೆ. ಅವತಡೆದ.

'ವ್ಯಾಕೆ ಹಾಲು, ನನಿಗ್ಗೊತ್ತಿಲ್ಲೇ, ಎಂದ

'ದಿಲೀಪ್...." ನಾನು ಮುನ್ನುಗಿದೆ. ಅವ ಬಿಡಲಿಲ್ಲ.

'ದಿಲೀಪ್, ವೈಜಯಂತಿ, ಮಧುಬಾಲ! ಮುಬ್ರೀಬಾಯಿ ಇವರಿಗೇನೋ ಗೊತ್ತಂತೆ" ಎಂದ.

'ತಮಾ, ಯಾಕೋ ನನ್ನ ಸತಾಯ್ಸಿತೀ. ಸುಮ್ನೆ ಉಂಡು ಬೆಚ್ಗೆ ಮಲಕ್ಕೋಹೋಗು. ಇನ್ನೊಂದ್ಸರ್ತಿ ನಮ್ಮಿಂಡಿಯನ್ ಕ್ರಿಕೆಟ್ ಸುದ್ದಿ ತೆಗದ್ರೆ, ತೆಗೆದು ಕೊಟ್ಟೇಬಿಟ್ಟೇನು! ಮೇಯಿಸಿ ಬಿಟ್ಟೇನು. ಏಳೇಳೋ' ಎಂದೆ ಅವ ಮೌನವಾಗಿ ಎದ್ದು ಹೊರಟುಹೋದ.

—ಅ. ರಾ. ಸೇ.

ಬಹಿರಂಗ ಪಡಿಸಿದ ಅಂತರಂಗ ಪತ್ರ

ಶ್ರೀ ಮೊರಾರ್ಜಿ ದೇಸಾಯರೇ!

ಅರ್ಥ ಸಚಿವರಾಗಿ ಕೇಂದ್ರದಲ್ಲಿ ತಾವು ನಡೆಸುತ್ತಿರುವ ತೀವ್ರ ಕಾರ್ಯಕ್ರಮಗಳನ್ನು ಕಂಡು ನಿಮ್ಮನ್ನು ಮೆಚ್ಚುವ ಸಹಸ್ರಾರು ಮಂದಿಗಳಲ್ಲಿ ನಾನೊಬ್ಬನೂ ಹೌದು!

ದೇಶವಿದೇಶಗಳಲ್ಲಿ ನಿತ್ಯಯಾತ್ರೆ ಎತ್ತಿ, ನಮ್ಮ ಉದಾತ್ತ ಜೀವನಕ್ಕೆ ಸುಮಾರ್ಗವಾಗಲೆಂದು ತಾವು ಪಡುತ್ತಿರುವ ಕಷ್ಟಕ್ಕೆ ಎಂದಾದರೂ ಪರದಲ್ಲಾದರೂ ಒಳ್ಳೆಯ ಫಲ ದೊರಕಲೇಬೇಕು.

ಆದರೆ ನಮ್ಮ ಕಾಲಮೇಲೆ ನಾವೇ ನಿಲ್ಲುವುದು ಅವಶ್ಯಕ ಎಂಬುದನ್ನು ಮನಗಂಡು ತಾವು ಸಣ್ಣ ಉಳಿ-ತಾಯ, ದೊಡ್ಡ ಉಳಿ-ತಾಯ, ಪುಟ್ಟ ಉಳಿ-ತಾಯ ಇವೆಲ್ಲವನ್ನೂ ಶುರುಮಾಡಿದ್ದೀರಿ. ಆದರೆ ಈ ಸಣ್ಣ ಪುಟ್ಟ ಉಳಿಗಳಿಂದ ತಾಕಿಸಿದರೆ, ಸಾಕಷ್ಟು ಗಾಯ ಆಗುವುದಿಲ್ಲವೆಂಬುದನ್ನು ತಿಳಿದಿದ್ದೀರಿ.

ಆದಕ್ಕೇ ತಾವು ಬೈರಿಗೆ, ಗರಗಸ, ಇವುಗಳನ್ನುಕೂಡ ಯಶಸ್ವಿಯಾಗಿ ವರಮಾನ ತೆರಿಗೆ, ಆಸ್ತಿ ತೆರಿಗೆ, ಖರ್ಚಿನ ತೆರಿಗೆ, ಸಾವಿನ ತೆರಿಗೆ, ಉಡುಗೊರೆ ತೆರಿಗೆ ಹೀಗೆ ವಿಧ ವಿಧ ತೆರಿಗೆಗಳ ರೂಪಿನಲ್ಲಿ ಉಪಯೋಗಿಸುತ್ತಿದ್ದೀರಿ.

ಆದರೂ ರಂಗೋಲಿ ಕೆಳಗೆ ನುಸುಳುವವರು ಇದ್ದೇ ಇದಾರೆ ಕರೀಕೋಣೆಯಲ್ಲಿ ಬಿಳಿರೂಪಾಯಿಗಳನ್ನು ಬಚ್ಚಿಡುವವರು ಹೆಚ್ಚುತ್ತಲೇ ಇದಾರೆ.

ಇದಕ್ಕೂ ತಾವೊಂದು ಉಪಾಯ ಹುಡುಕಿದ್ದೀರಿ. ಅಂಥಾ ಧರ್ಮರಾಯನೇ ಅಶ್ವತ್ಥಾಮೋ ಹತಃ ಎಂದು ಕೂಗಿದಂತೆ, ಇಂದಿನ ಧರ್ಮರಾಯನ ಗೋತ್ರದ ಪವಿತ್ರತೆಯನ್ನು ಕಾಪಾಡುವ ತಾವು ಅದೇರೀತಿ. Prize Bonds ಅಂತ ಒಂದು ಪವಿತ್ರ ಸಂಪ್ರದಾಯವನ್ನು ಕುಶಾಗ್ರಮತಿಯಿಂದ ಶುರು ಮಾಡಿದ್ದೀರಿ ಈ ಸಂಪ್ರದಾಯವು ಧರ್ಮರಾಯ ಜೂಜಾಡಿದಂತೆ ಮಾತ್ರ. ದರ್ಮ ಸಂಸ್ಥಾಪನೆಗೆ ವಿನಿಯೋಗ ಎಂದೂ ಶ್ರುತಪಡಿಸಿದ್ದೀರಿ.

ಸಾಕಷ್ಟು ಜನ ಹಳ್ಳಕ್ಕೆ ಗೊಂಚಲು ಗೊಂಚಲಾಗಿ ಈ ಸಂಪ್ರದಾಯಕ್ಕೆ ಶರಣುಬಿದ್ದಿರುವುದು. ತಮ್ಮ ಯೋಜನೆಗೆ ಯಶಸ್ಸನ್ನು ತಂದಿದೆ ದಿಟ. ಆದರೆ ಸಾಕಷ್ಟು ಫಲ ಬಂದಿಲ್ಲ.

ಅದಕ್ಕೇ ನನ್ನ ಅಳಿಲು ಸೇವೆ ಮಾಡಲು, ಈ ಬಹಿರಂಗ ಪತ್ರವನ್ನು ತಮಗೆ ಅಂತರಂಗದಿಂದ ಬರೆದಿದ್ದೇವೆ. ನನ್ನ ಸಲಹೆ ಇಷ್ಟೇ!!

ಲಾಗಾಯ್ತಿನಿಂದ ಹಣವಿದ್ದವರ ಹತ್ತಿರ ಚಪ್ಪಲಿ ತೊಳೆಯುಕ್ಕೆ ಹೋಗ್ತಾ ಇದೀನಿ. ಹಣವಂತರ ಮನಸ್ಸು ಹೇಗಿದೆ ಅಂತ ಗೊತ್ತು. ಅದಕ್ಕೆ ನನಗನ್ನಿಸಿದ್ದು.

ಈ ಹಣವಂತರಿಗೆಲ್ಲಾ ಬಿರುದು ಹೊಂದಬೇಕು ಎಂದು ತುಂಬಾ ಆಸೆ ಪದ್ಮಶ್ರಿ ಮೂರಲ್ಲದಿದ್ದರೆ ಆರು ವರ್ಗಗಳನ್ನಾಗಿ ಮಾಡಿ. ಇದರಲ್ಲಿ ಒಂದನ್ನು Prize Bonds ಗಳನ್ನು ಹತ್ತು ಸಾವಿರ ರೂಪಾಯಿಗಿಂತ ಹೆಚ್ಚಾಗಿ ತೆಗೆದು ಕೊಳ್ಳುವವರಿಗೆ ಅಂತ ಮೀಸಲಾಗಿರಿಸಿ. ಇನ್ನೊಂದನ್ನು ಒಂದು ಲಕ್ಷವೊತ್ತದ Prize Bonds ಕೊಂಡವರಿಗೆ ಮೀಸಲಾಗಿರಿಸಿ.

ಈ ಪತ್ರಗಳ ಬಹುಮಾನವನ್ನು ವರ್ಷಕ್ಕೊಮ್ಮೆ ಎಂದು ನಿಖರ ಮಾಡಿ. ಬಹುಮಾನ ಬಂದವರಿಗೆ ಪದ್ಮಶ್ರಿ ಇಂಥ ವರ್ಗ ಅಂತ ಬಿರುದು ಹಂಚಿ.

ನೋಡಿ! ಆಗ ನಿಮ್ಮ ಅದೃಷ್ಟಾನ! ಹೊಸದಾಗಿ ದೊಡ್ಡ ದೊಡ್ಡ ಖಜಾನೆ ಕಟ್ಟಿಸಬೇಕಾಗುತ್ತೆ. ಹಣ ಎಣಿಸೋದಕ್ಕೆ ಉಪ ಸಚಿವರನ್ನು ನೇಮಿಸಬೇಕಾಗುತ್ತೆ. ಪಾದಯಾತ್ರೆ ತಲೆ ಯಾತ್ರೆ ಚಾಚಿದ ಅಂಗೈ ಯಾತ್ರೆ ನಿತ್ಯ ಯಾತ್ರೆ ಇವೆಲ್ಲಾ ತಪ್ಪಿಹೋಗುತ್ತೆ.

ನೀವು ಬಡ್ಜೆಟ್ ಮಂಡಿಸೋಕ್ಕೆ ಮೊದಲೇ ಈ ಸಲಹೆಯನ್ನು ರಾಷ್ಟ್ರ ಸೇವೆ ಅಂತ ಪುಕಟ್ಟಾಗಿ ಕೊಡುತ್ತಿದ್ದೇನೆ. ಇದನ್ನು ನೀವು ಮಾಡಿದರೆ, ಕಾರ್ಯ ರೂಪಕ್ಕೆ ತಂದರೆ, ಖೋತಾ ಬಜೆಟ್ ಇರುಲ್ಲ. ಹೊಸ ತೆರಿಗೆ ಹಾಕಬೇಕಾಗುಲ್ಲ. ಎಲ್ಲರ ಸ್ನೇಹ ಪಡೆಯೋದು ಕ್ಷೇಮ. ಚುನಾವಣೆ ಹತ್ತಿರ ಬಂತು.

* * * * *

ನನ್ನ ಸಲಹೇನೇನಾದರೂ ಒಪ್ಪಿಕೊಂಡು ಜಾರಿಗೆ ತಂದರೆ, ಹಣ ಎಣಿಸೋ ಉಪಸಚಿವರ ಕೆಲಸಕ್ಕೆ ನಾನು ಸಿದ್ಧನಾಗಿದ್ದೀನಿ. ಕಂಡೋರ ಚಪ್ಪಲೀಗೆ ಬಣ್ಣ ಹಾಕಿ ಮೊಳೆ ಹೊಡೆದು ಕಾಲುಹಿಡಿದು ತೊಡಿಸಿ ತೊಡಿಸಿ ನಂಗೂ ಬೇಜಾರಾಗಿದೆ.

ಇತಿ ನಿಮ್ಮ ಅನರ್ಥ ಸೇವಕ

ಜಂಡಾಕುಮಾರ್

ಆಫೀಸ್ನಲ್ಲಿ ಬಂದು ನೋಡಿ

ರಾಯರು ಮೊದಲೇ ಹೇಳಿದ್ದರು "ಆಫೀಸ್ನಲ್ಲಿ ಬಂದು ನೋಡಿ" ಎಂತ.

ಆದರೆ ನಾನು ಮಾತನಾಡಬೇಕಾಗಿದ್ದುದು ಆಫೀಸಿನ ವಿಷಯವಲ್ಲ. ನನ್ನ ಸ್ವಂತ ವಿಷಯವೂ ಅಲ್ಲ. ಸಾರ್ವಜನಿಕವಾದದ್ದು.

"ಆಫೀಸಲ್ಲಿ, ಬಂದು ನೋಡಿ ಬಿಟ್ವೀನ್ ತ್ರೀ ಅಂಡ್ ಫೋರ್" ಎಂದಿದ್ದರು ನಿಜ. ಅದು ಅವರು ಹೊರಗಿನಿಂದ ಬರುವವರಿಗೆ ಇಂಟರ್‌ವ್ಯೂ ಕೊಡುವ ಸಮಯ ಅಂದರೆ, ಅದೂ ಆಫೀಸಿನ ಸಂಬಂಧವಾದದ್ದು.

ನನಗೆ ಆ ಆಫೀಸಿನ ಆಡಂಬರ, ನಿರ್ಬಂಧ, ಸಿಬ್ಬಂದಿ, ವಾತಾವರಣ, ಬೇಕಿರಲಿಲ್ಲ. ನಾನು ರಾಯರ ಕೂಡ ನಿರಾತಂಕವಾಗಿ ಸುಮಾರು ಒಂದು ಗಂಟೆ ಕಾಲ ಚರ್ಚಿಸಬೇಕಾದ ವಿಷಯ ಅದು. ಅವರ ಟೆಲಿಫೋನು, ಕಾಲಿಂಗ್‌ಬೆಲ್ಲು, ವಿಸಿಟಿಂಗ್ ಕಾರ್ಡು–ತರುವಿಕೆ ಇವು ನನಗೆ ಬೇಜಾರು. ಕೊಂಚ ಅನುಮಾನಿಸಿ ನಂತರ ನಿರ್ಧಾರಕ್ಕೆ ಬಂದೆ, ರಾಯರನ್ನು ಅವರ ಮನೆಯಲ್ಲಿಯೇ ಸುಮಾರು ಸಂಜೆ ಏಳೂವರೆ ಗಂಟೆಗೆ ಹೋಗಿ ಭೇಟಿ ಮಾಡುವುದೆಂದು.

ರಾಯರ ಕುಟುಂಬ ಎರಡನೇ ಮದುವೇದು ಎಂತ ಕೇಳಿದ್ದಂತೆ ಅರೆ ನೆನಪು....ಅಂತೂ ಮನಸ್ಸು ಖಂಡಿತ ಮಾಡಿಕೊಂಡು ಸಾಯಂಕಾಲ ಹೋದೆ.

ರಾಯರು ಇನ್ನೂ ಸೂಟು ಬಿಚ್ಚಿರಲಿಲ್ಲ, ಷೂ ಮಾತ್ರ ಬಿಚ್ಚಿದ್ದರು, ಕಾಲು ಚೀಲದಲ್ಲಿದ್ದರು (ಹಿಮ್ಮಡಿ ಹರಿದಿದೆಯೋ ಏನೋ ಎಂದು ಆ ಕಡೆ ನಾನು ಈಕ್ಷಿಸಲಿಲ್ಲ) ಟೈಯನ್ನು ಬಿಚ್ಚಿರಲಿಲ್ಲ. ಆದರೆ ಅದನ್ನು ಹಿಡಿದು ಯಾರೋ ಬಲವಾಗಿ ಜಗ್ಗಿದ್ದಿದ್ದರೆ ಹೇಗೋ ಹಾಗೆ ಬಿಗಿ–ಗಂಟು ಬಿದ್ದಿತ್ತು. ಸರಿ, ಇನ್ಯಾರು, ಮಗ ತುಂಟ ಶ್ರೀಧರ ಹಿಡಿದು ಅಪ್ಪನ ಟೈನಿಂದ ಉಯ್ಯಾಲೆ ಮಾಡಿದ್ದುದರಿಂದ ಎಂಬುದನ್ನು ಈಗ ಖಂಡಿತ ಹೇಳಬಲ್ಲೆ.

"ನಮಸ್ಕಾರ ಬನ್ನಿ ಮಿಸ್ಟರ್ ಅಪ್ಪಯ್ಯ ...ಹೋಗೋ, ಆ ಸ್ಲೇಟೂ ಬಳಪ ಎಲ್ಲಾ ತೆಗೆದಿಡೋ, ಏನು ಹೀಗೆ ಹರಡಿದ್ದ ಮೇಜಿನ ಮೇಲೆಲ್ಲಾ ...ಕೂತುಕೊಳ್ಳಿ ಅಪ್ಪಯ್ಯ" ಎಂದು ಕುರ್ಚಿ ತೋರಿಸಿದರು.

ಅದರ ಮೇಲಿದ್ದ ಗಾಜಿನ ಲೋಟವನ್ನು ತೆಗೆದು ಮೇಜಿನ ಮೇಲಿಂಸಿ ಕೂತುಕೊಂಡೆ. "ನಾನು...." ಎಂತ ಪ್ರಾರಂಭಿಸಿದೆ.

" ಲೇ ಅವಳಿಲ್ಲಿ ಮಂಡೋದರಿ, ಮಂಡಕ್ಕೀನೆಲ್ಲಾ ಚೆಲ್ಲಿಬಿಟ್ಟು ಹೋಗಿದ್ದಾಳೆ, ನೆಲದ ಮೇಲೆ" ಎಂದು–ಇನ್ಯಾರು, ಯಜಮಾನಮ್ಮನೇ ಇರಬೇಕು ಎಂದುಕೊಂಡೆ ಕೂಗಾಡುತ್ತಿದ್ದುದು ಕೇಳಿಸಿತು.

ರಾಯರು " ಕ್ಷಮಿಸಿ ಮಿಸ್ಟರ್ ಅಪ್ಪಯ್ಯ " ಎಂದು ಎದ್ದು ಹೋಗಿ ಒಳಬಾಗಿಲನ್ನು ಮುಚ್ಚುವಂತೆ ಸರಿಸಿ ಬಂದರು.

ಮರು ಕ್ಷಣದಲ್ಲಿ ಧಡಾರ್ ಎಂತ ಬಾಗಿಲು ತೆರೆಯಿತು. ಅವನೇ, ನಾರಾಯಣ ಹನ್ನೆರಡು ವರ್ಷದ ಧಡಿಯ ಮೂರು ಚಕ್ರದ ಸೈಕಲ್ ಏರಿ ಬಾಗಿಲನ್ನು ಧಡಾರನೆ ನೂಕಿಕೊಂಡು ಬಂದ ನಾವು ಕೂತಿದ್ದ ಕಡೆ.

" ನಾರಾಯಣಾ, ನಾನು ಎಷ್ಟು ಸಲ ಹೇಳಿದ್ದೇನೆ....ಮನೇಗೆ ಯಾರಾದರೂ ಬಂದಿದ್ದಾಗ....ಮೂರು ಚಕ್ರ ಏರಿ ನೀನೇದರೂ ಬಂದೆಯೋ...." ಎನ್ನುತ್ತ ನಾರಾಯಣನನ್ನು ಅಲ್ಲಿಂದ ತರುಮಿದರು.

" ಇನ್ನೇನೂ ಇಲ್ಲ ಸಾರ್....ಮತ್ತೆ....ನಿಮಗೆ ತೊಂದರೆ ಕೊಡೋಕೆ...." ಎಂದನ್ನುತ್ತಿದ್ದೆ....

" ದೆವ್ವ........ನೀನು ಬೇಕಾದರೆ ದೇವ್ವ........ಕೊಳ್ಳೀ ದೆವ್ವ ...." ಎಂದು ನಾರಾಯಣನ ತಂಗಿ. ಮಂಡೋದರಿ ಇರಬೇಕು ಎಂದುಕೊಂಡೆ ಒಂದು ಹುಡುಗಿ ದೆವ್ವದ ವಿಷಯ ಮಾತಾಡುತ್ತಿದ್ದುದು ಹಾರವಾಗಿ ತೆರೆದಿದ್ದ ಬಾಗಿಲಿನಿಂದ ಕೇಳಿ ಬಂತು.

ರಾಯರು " ಲೇ, ರೌದ್ರೀ, ಏನದು? ರಾದ್ಧಾಂತ ಮಾಡುತ್ತಿದ್ದೀಯೆ? ಕೊಂಚ ಸುಮ್ನಿರೇ....ಎಂದು ಬಾಗಿಲನ್ನು ಸರಿಸಿ ಬಂದರು.

" ಕ್ಷಮಿಸಬೇಕು ಮಿಸ್ಟರ್ ಅಪ್ಪಯ್ಯ ಆ ಕಮಿಟೀ ಮೀಟಿಂಗನ್ನು ಯಾಕೆ ನಾವು....? ಎಂದವರು ಅನ್ನುತ್ತಿರುವಷ್ಟರಲ್ಲಿ.

ಠಣಾರ್-ಡಬ್ ಎಂತ ಸದ್ದಾಯಿತು ಒಳಗೆ. ಟ್ರೇ ಸಮೇತ ಪಿಂಗಾಣಿ ತಟ್ಟೆಗಳು, ಬಟ್ಟಲುಗಳು, ಕಾಫೀ ಪಾಟು, ಸಕ್ಕರೆ ಬಟ್ಟಲು, ಒಟ್ಟು ಸುಮಾರು ಹದಿನೇಳು ಪಿಂಗಾಣಿ ಪಾತ್ರೆಗಳು ಒಮ್ಮೆಲೇ ಒಡೆದು ನೂರು ಚೂರಾಯಿತೆಂದು ಪ್ರತ್ಯಕ್ಷ ನೋಡದಿದ್ದರೂ ಕೂಡ ನನಗೆ ಭಾಸವಾಯಿತು.

ಒಳಗಿನಿಂದ ಯಜಮಾನಮ್ಮ ಗರ್ಜಿಸಿದರು, " ಮಾಡಿದೆಯಾಮ್ಮ ಕಡೆಗೂ.... ಪಿಂಗಾಣಿ ಸೆಟ್ ಬೇಡ ಬೇಡಾ, ಸ್ಟೆಯ್ನಲೆಸ್ ಸ್ಟೀಲಿಂದು ಬೇಕೊಂದ್ರೆ ಕೇಳ್ತಾ

ರೆಯೇ? ಏನೋ ಫ್ಯಾಷನ್ ಬೇಕಂತೆ ಫ್ಯಾಷನ್ನು, ಕಾಫೀ ಯಾವ ಬಟ್ಲಿಂದ ಕುಡಿದರೆ ಏನು....ಅಯ್ಯೋ, ನಾಶವಾಗಿ ಹೋಯ್ತಲ್ಲೀ, ಒಂದೇ ಏಟ್ಗೆ, ಸೆಟ್ ಸೆಟ್ಟೇನೇ ಹೋಯ್ತಲ್ಲೀ...."

"ಮಿಸ್ಟರ್ ಅಪ್ಪಯ್ಯ....ಎಂದು ರಾಯರು ದೈನ್ಯದಿಂದ ನನ್ನ ಕಡೆ ನೋಡಿದರು. ನಾನು "ಸರ್, ಕ್ಷಮಿಸಿ...." ಎಂದು ಪ್ರಾರಂಭಿಸಿದೆ.

"ಅಯ್ಯಯ್ಯೊ... ಬೇಡ ....ಬೇಡೀಮ್ಮಾ.....ಹೊಡೀಬೇಡಿ ಸೌಟಿಂದ...., " ಎಂದು ಚೀರಿದ್ದು ಅಡಿಗೆಮನೆ ಕಡೆಯಿಂದ ಕೇಳಿಬಂತು.

ರಾಯರು ತಮ್ಮ ಟೈಯನ್ನು ಸಡಿಲಮಾಡಿಕೊಳ್ಳುತ್ತ ಇದ್ದರು ಇದ್ದಕ್ಕಿದ್ದಂತೆ ತಾವು ಕುಂಟಿಸುತ್ತಿದ್ದ ಕುರ್ಚಿಯ ಬ್ಯಾಲೆನ್ಸ್ ತಪ್ಪಿ ಹಿಂದಕ್ಕೆ ಕುರ್ಚಿಸಮೇತ ಬಿದ್ದರು. ಮುಖವೆಲ್ಲ ನಾಗದಾಳಿ ಹಣ್ಣಿನಂತೆ ಕೆಂಪಗಾಗಿತ್ತು.

ನಾನು ಗಾಬರಿಯಿಂದೆದ್ದು ರಾಯರ ಜೀರುಕುಣಿಕೆಯಂತೆ ಬಿಗಿದಿದ್ದ ಟೈಯನ್ನು ಸಡಿಲಮಾಡಲು ಪ್ರಾರಂಭಿಸಿದೆ. ಧಡಾರನೆ ಒಳಬಾಗಿಲನ್ನು ತೆಗೆದು ರಾಯರ ಶ್ರೀಮತಿಯವರು ಸೌಟಿನಸಮೇತ ಓಡಿಬಂದರು ...ಅಯ್ಯೋ ಅಯ್ಯೋ.... ಬಾರೋ ನಾರಾಯಣ, ಬಾರೇ ರಂಜೀ....ಯಾವನೋ ನಿಮ್ಮಪ್ಪನ ಕತ್ತಿಗೆ ಕಿವಿಚೋಕೆ ಕೈ ಹಾಕುತ್ತಿದಾನೆ... ಅಯೋ, ಅಯೋ....ಇನ್ನೇನು ಗತಿ... ಪೋಲೀಸ್ ಪೋಲೀಸ್....ಕೂಗೋರೊ ಸರ್ಕಲ್ ಪೋಲೀಸ್ನೋನ್ನ—ಅಯ್ಯೋ ಇದೇನಪ್ಪಾ ಗತಿ ಬಂತೂ "ಎಂದವರು ಗಲಭೆ ಎಬ್ಬಿಸುವವೇಳೆಗೆ ರಾಯರು ಮೆಲ್ಲನೆ ತಾವೇ ಎದ್ದು ಕೂತರು. ಥ್ಯಾಂಕ್ಸ್ ಮಿಸ್ಟರ್ ಅಪ್ಪಯ್ಯ!" ಎಂದರು.

ಅವರ ಹೆಂಡತಿಯ ಮುಖದ ಮೇಲೆ ನಿಶ್ಚಯ, ಕೈಯಲ್ಲಿ ಸೌಟು ...ನಾರಾಯಣನ ಕೈಲಿ ಸ್ಕಿಪ್ಪಿಂಗ್ ಹಗ್ಗ....ರಂಜೀಕೈಲಿ ಒಡೆದ ಪಿಂಗಾಣಿ ಬಟ್ಟಲಿನ ಚೂರೊಂದು....

"ಸರ್, ಕ್ಷಮಿಸಿ" ಎಂದೆ.

"ಕ್ಷಮಿಸಬೇಕು, ಮಿಸ್ಟರ್ ಅಪ್ಪಯ್ಯ, ನಾಳೆ ಆಫೀಸಲ್ಲಿ ಬಂದು ನೋಡಿ ದಯವಿಟ್ಟು ಬಿಟ್ವೀನ್ ತ್ರೀ ಅಂಡ್" ಎಂದರು.

ಸಾರ್ವಜನಿಕ ಕೆಲಸ ಒಪ್ಕೊಂಡ್ರೆ ಇಂಥವೆಲ್ಲಾ ಪೀಕಲಾಟಕ್ಕೆ ಸಿಕ್ಕಬೇಕು" ಮನಸ್ಸಿನಲ್ಲಿಯೇ ಅಂದುಕೊಂಡು "ನಮಸ್ಕಾರ ಸಾರ್-ಬರ್ತೀನಿ ...ನಮಸ್ಕಾರಾಮ್ಮಾ ಎಂದು ಸೌಟು ಹಿಡಿದಿದ್ದಾಕೆಗೆ ಅರಚಿ ಅಲ್ಲಿಂದ ಹೊರಟು ಬಂದೆ....

"ಎರಡನೇ ಹೆಂಡತಿ, ಎರಡನೇ ಸಂಸಾರ" ಅಂತ ರಾಯರ ವಿಷಯ ಯಾರೋ ಹೇಳಿದ್ದುದು ಜ್ಞಾಪಕಕ್ಕೆ ಬಂತು, ನಿದರ್ಶನ ಸ್ಪಷ್ಟವಾಗಿತ್ತು ..!

— ಡೂನು

ಗಾಂಪರ ಗುಂಪು

" ಖಾನಾವಳಿಯಲ್ಲಿ "

ಗಾಂಪರೊಡೆಯರು ಶಿಷ್ಯಮಂಡಳಿಯೊಡನೆ ಬಕಿಂಗ್‌ಹ್ಯಾಂಪ್ಯಾಲೆಸ್ ರೋಡಿನಲ್ಲಿರುವ ಗಗನಚುಂಬಿತ ಭವನ Boacಯವರ " ಏರ್‌ವೇಸ್ ಹೌಸ್ " ಮುಂದಿನ ತೊಟ್ಟಿಯಲ್ಲಿ ನಿಂತಿದ್ದರು ತಮ್ಮ ಹಾಸಿಗೆ ಟ್ರಂಕುಗಳು ಬರಲು ಕಾದಿದ್ದರು.

" ಹರಿದು ಬಾ ತಾಯಿ-ಹರಿದು ಬಾ "-ಎಂದ ಮಡ್ಡಿ. ವಿಮಾನ ನಿಲ್ದಾಣದಿಂದ ಹೊತ್ತು ತಂದ ಸಾಮಾನುಗಳು ಅಗಲವಾದ ಪಟ್ಟಿಯ (Conveyer Belt) ಮೇಲಿಂದ ಹರಿದು ಬಂದವು. ಅದನ್ನು ನೋಡಿಯೇ ಮಡ್ಡಿ ಹಾಗೆ ಅಂದದ್ದು.

" ಗುರುಗಳೇ ಇಲ್ಲಿ ಜನ ಬಹಳ ಸೋಮಾರಿಗಳು-ನಮ್ಮೂರ ಹಮಾಲರು ಆರಾಮವಾಗಿ ಹೊತ್ತುತರೋ ಹಾಗೆ ಇವರುಗಳೂ ಸಾಮಾನು ಹೊತ್ತುತರಬಾರದೆ ?-ಗುಡಾರದ ಪಟ್ಟಿಗೆ ಗಾಲಿ ಹಚ್ಚಿ ಈ ಸಾಮಾನುಗಳನ್ನ ತೇಲಿಬಿಟ್ಟಿದ್ದಾರಲ್ಲಾ ಅದರ ಮೇಲೆ-ಉಗುರಲ್ಲಿ ಹೋಗೋದಕ್ಕೆ ಕೊಡ್ಲಿ ತೊಗೊಳ್ಳೊ ಜನ ಇವರು "-ಎಂದು ತನ್ನ ಅಭಿಪ್ರಾಯ ಹೇಳಿದ ಮಡೆಯ.

" Thank you "-ಮರುಳ.

" ಮತ್ತೆ ತೆಗೆದನಪ್ಪ ಇವನ ಶ್ಯಾಣೆತನಾನ-ನನಗ್ಯಾಕೆ-ನನ್ನ ಅಭಿಪ್ರಾಯಕ್ಕೆ ಥ್ಯಾಂಕ್ಯೂ ಅಂತೀಯಲೇ " ಮಡೆಯ

" Excuse me "-ಎಂದು ಈ ಮಾತಿಗೆ ಉತ್ತರಿಸಿದ ಮರುಳ.

" ನೀನು ಲಂಡನ್ನಿಗೆ ಬಂದ್ರೂ ಒಂದೆ-ರುಂಡಾ-ರವೆವುಂಡಿಗೆ ಹೋದ್ರೂ ಒಂದೇ-ಗುಡಿಬಂಡೆಲಿ ರವೆ ಉಂಡಿ ಕದೀತಿದ್ರೂ ಒಂದೆ-ಎಕ್ಸ್‌ಕ್ಯೂಸ್ ಮಾಡಿಸಿ ಕೊಳ್ಳೊ ಅಂಥ ಕೆಲಸ ಏನು ಮಾಡಿದ್ದೀಯೋ ಮರುಳಾ "

" Thank you....Please....Excuse me-ಇವು ಮೂರು ಮುಖ್ಯ ಅಂತ ಗುರುಗಳು ಆಜ್ಞಾಪಿಸಿರಲಿಲ್ಲೇನೋ-ಅದನ್ನ ಬಾಯಿಪಾಠ ಮಾಡ್ತಿದ್ರೆ ನಿನಗ್ಯಾವೊನೊ ಹೇಳ್ಬೋದ್ದೇನು"

—ಮಾತು ಕೊಂಚ ಬಿರುಸಾಗಿ ಸಾಗಿತು-ಸುತ್ತಲಿದ್ದ ಅಂಗ್ರೇಜಿ ಮಂದಿ ಇತರರ ಗೋಜು ನಮಗೇಕೆ ಎಂದು ತಮ್ಮ ತಮ್ಮ ಕೆಲಸಗಳಲ್ಲಿ ನಿರತರಾಗಿರುವ ಸ್ವಭಾವದವರಾಗಿದ್ದರೂ ಈ ಗಾಂಪರ ಗಲಾಟೆಗೆ ಎಂಥವರೂ ತಿರುಗಿ ನೋಡಲೇ ಬೇಕಷ್ಟೆ. ಒಂದಾದ ಮೇಲೊಂದು ಟ್ಯಾಕ್ಸಿಗಳು ಬಂದು ಏರ್‌ಹೌಸ್‌ನಲ್ಲಿದ್ದ ಮಂದಿಯನ್ನೆಲ್ಲಾ ತುಂಬಿಕೊಂಡು ಹೋದವು. "ಹರಿದು ಬಾ ತಾಯಿ ಹರಿದು ಬಾ" ಎಂದು ಮತ್ತೆ ಅನ್ನುತ್ತಿದ್ದಂತೆಯೇ ಗಾಂಪರೊಡೆಯರ ಹಳದೀ ಥರ್ಮಾಸ್ ಟ್ರಂಕು ಕಂಬ್ಳಿ ಹಾಸಿಗೆ ಇತ್ಯಾದಿಗಳು ಕನ್ವೆಯರ್ ಬೆಲ್ಟಿನ ಮೇಲೆ ಹರಿದುಬಂದವು. B. O. A. C. ಆಳು ಎಲ್ಲವನ್ನೂ ಇಳಿಸಿ ಇವು ಯಾರವು? ಎಂದು ಕೊಳೆತ ಹೆಗ್ಗಣವನ್ನಿಳಿಸುವಂತೆ ಗಾಂಪರ ಕಂತೆಗಳನ್ನು ನೆಲದಲ್ಲಿ ಹರಡಿದ.

" ಟ್ಯಾಕ್ಸಿ ಸರ್ "-B. O. A. C ಬಂಟ ಕೇಳಿದ.

" ಎಸ್ ಥ್ಯಾಂಕ್‌ಯು "-ಗುರುಗಳು.

" ಗುರುಗಳೇ ನಾವು ಸೀದಾ ನ್ಯಾಷನಲ್ ಹೋಟಲಿಗೇ ಹೋಗಿಬಿಡೋಣವೇ ? "

" ಹೌದು ಮಂಕ ಮಗೂ ನಾವು ಅಲ್ಲೇ ಠಿಕಾಣಿ ಹಾಕಬೇಕೂಂತ ಆ ಸ್ವರ್ಗಸುಖ ಟ್ರಾವಲ್ಸ ಅವರು ಕಾಗದ ಬರೆದಿರಲಿಲ್ಲವೆ ? "

ಇಷ್ಟು ಹೊತ್ತಿಗೆ ಟ್ಯಾಕ್ಸಿ ಬಂತು ಗುರುಗಳು ಮಡ್ಡಿಗೆ ಟ್ಯಾಕ್ಸಿಗೆ ಸಾಮಾನು ಹೇರಿಸಲು ಹೇಳಿದರು. ಮಂಕನಿಗೆ ಟ್ಯಾಕ್ಸಿ ರೇಟು ಕುದುರಿಸುವಂತೆ ಆಜ್ಞಾಪಿಸಿದರು.

" ವ್ಹೇರ್ ಟು ಸರ್-"-Taxiಯುವ.

" ನಾಷಿನಲ್ ಹೋಟೇಲ್-ರಸೆಲ್ ಸ್ಕ್ವಯರ್ ಕು ಕ್ಯಾ ದೇನಾಜಿ...."

" ಬೆಗ್ ಯುವರ್ ಪಾರ್ಡನ್ ಸರ್ " ತಬ್ಬಿಬ್ಬಾಗಿ ಆ ಟ್ಯಾಕ್ಸಿಯ ಪ್ರಶ್ನಾರ್ಥಕ ಚಿನ್ಹೆಯಂತೆ ನುಲಿಗಿದ.

" Excuse me–ವ್ಹಾಟ್ ಮನಿ ಐ ಗಿವ್ ಸಾರಿ–ವಿ ಗಿವ್ ಯು-ಹೈರ್ ಟ್ಯಾಕ್ಸಿ ಹೈರ್ ಮಾಲುಂನ್ನೈ.. ಗುರುಗಳೇ ಇವನಿಗೆ ತಿಳೀವಲ್ಲದಲ್ಲಾ "-ಎಂದು ಕೈ ಕೈ ಹೊಸೆದುಕೊಂಡು ಪೇಚಾಡಿದ ಮಂಕ

" ನೀನು ಈ ಕಡೆ ಬಾರೊ ನಾನು ಮಾತಾಡ್ತಿನಿ ..." ಎಂದು ಸ್ವಯಂ ಗುರುಗಳೇ ನಿಂತರು ..." ದಯವಿಟ್ಟು ನಮ್ಮನ್ನು ರಸಲ್ ಸ್ಕ್ವಯರ್ ಹತ್ತಿರದ ನ್ಯಾಷಿನಲ್ ಹೋಟಲಿಗೆ ಸಾಗಿಸುವೆಯಾ ?"-ಎಂದು ಅತಿ ವಿನಯದ ಇಂಗ್ಲೀಷಿನಲ್ಲಿ ಕೇಳಿದರು. " ಮೀಟರು ನೋಡೋ ಅದರಲ್ಲಿ ನಮ್ಮ ಚಾರ್ಜು ಬರೆದಿರತ್ತೆ " " ಯಸ್ ಸರ್ "-ಸರಸರ ಸಾಮಾನು ಹೇರಲು ಸಹಾಯ ಮಾಡತೊಡಗಿದ Taxi ಯುವ. ಆದರೆ ಮಡ್ಡಿ ಹಳದಿ ಥಮಾರ್ಟ್ರಂಕು ಕಂಬಳಿಗಂಟನ್ನು ಟ್ಯಾಕ್ಸಿಯ ಚಪ್ಪರದ ಮೇಲೆ ಸರಿಸುತ್ತಿದ್ದ. ಆ ಲಂಡನ್ ಟ್ಯಾಕ್ಸಿಯುವ ಅವುಗಳನ್ನ ಇಳಿಸಿ ತಾನು ಕೂಡ್ರುವ ಜಾಗದ ಪಕ್ಕದಲ್ಲಿಯೇ ಇದ್ದ ಅದರ ಜಾಗದಲ್ಲಿ ಪೇರಿಸಿದ.

" ಗುರುಗಳೇ ಈ ಊರು ಟ್ಯಾಕ್ಸಿಗಳು ಮಜ ಇಲ್ಲ-ಕರೀಬಣ್ಣ-ಜಗಳ ಇಲ್ಲ-ಬರೇ ಮೀಟರು ತೋರಿಸಿದ ಹಣವನ್ನೆ ಕರಾರು ವಾಕ್ಯಾಗೆ ಕೊಡಬೇಕಂತೆ-ಎಂಥಾ ಸಾಧು ಜನೋದ್ಧರ ಟ್ಯಾಕ್ಸಿಯವರಪ್ಪ ಲಂಡನ್ ಟ್ಯಾಕ್ಸಿಯವರು "

—ಒಂದು ಟ್ಯಾಕ್ಸಿಯಲ್ಲಿ ಬರೇ ಸಾಮಾನು ಆಯಿತು. ಸಾರ್ ಈ ಟ್ಯಾಕ್ಸಿ ಸಾಮಾನಿಗೆ ಸರಿ ಹೋಯ್ತು-ನೀವುಗಳು ಬರಲಿಕ್ಕೆ ಒಂದು ಲಾರಿ ನೋಡಿ "–ಎಂದ ಆ ಟ್ಯಾಕ್ಸಿಯುವ.

" ಗುರುಗಳೇ ಈ ಇಂಗ್ಲೀಷ್ ಮಂದಿ ಬಹಳ ಹಿಂದೆ ಉಳಿದಿದ್ದಾರೆ-ಜನನ್ನ ಲಾರೀಲಿ ತುಂಬಿ-ಸಾಮಾನುಗಳನ್ನ ಟ್ಯಾಕ್ಸಿಲಿ ಸಾಗನೋದೆ?....ಅವನಿಗೆ ಹೇಳ್ತಿನಿ ತಡೀರಿ . ಲಿಸೇ ಟ್ಯಾಕ್ಸಿಮ್ಯಾನ್ ವಿ-ನಾವು ಸಿಟ್ ಅಂಡ್ ಕಂ ಇನ್ ಟ್ಯಾಕ್ಸಿ ಅಂಡರ್ಸ್ಟ್ಯಾಂಡ್ .

—Boac ಬಂಟ ಆಗಲೇ ಇನ್ನೊಂದು ಟ್ಯಾಕ್ಸಿಯವನನ್ನು ಕೂಗಿ ಕರೆದಿದ್ದ. ಎರಡು ಟ್ಯಾಕ್ಸಿಗಳಿಗೂ ಗುರು ಶಿಷ್ಯಮಂಡಲಿ ಸಾಮಾನು ಸಮೇತ ಹಂಚಿಕೊಂಡು ಕೂತು ಬಕಿಂಗ್‌ಹ್ಯಾಂ ಅರಮನೆ ರಸ್ತೆಯಲ್ಲಿ ರಾಜಗುರು ರೀವಿಯಿಂದ ನಾಷಿನಲ್ ಹೋಟೇಲ್ ಎಂಬೆಡೆಗೆ ತೆರಳಿದರ್.

" ವಿಕ್ಟೋರಿಯಾ ಕೋಚ್ ಸ್ಟೇಷನ್ "

" ವಿಕ್ಟೋರಿಯಾ-ರೈಲ್ವೆಸ್ಟೇಷನ್ "

" ವಿಕ್ಟೋರಿಯಾ-ರೋಡ್ "

" ವಿಕ್ಟೋರಿಯಾ-ಎಂಬ್ಯಾಂಕ್‌ಮೆಂಟ್ "

“ ವಿಕ್ಟೋರಿಯಾ-ಗಾರ್ಡನ್ ”

“ ವಿಕ್ಟೋರಿಯಾ-ಬ್ಯಾಂಡ್ ಸ್ಟಾಂಡ್ ”

“ ವಿಕ್ಟೋರಿಯಾ-ವಿಕ್ಟೋರಿ-ವಿಕ್ಟರಿ-ವಿಕ್ಟ-ವಿ ”

—ಹೊ ! ಬರೀ ವಿಕ್ಟೋರಿಯಾ ಮಯ ಈ ಲಂಡನ್ನು ಎಂದೆನ್ನಿಸಿತು ಗಾಂಪರ ಗುಂಪಿಗೆ ಇದ್ಯಾವುದು ? ಇದೇನು ? ಎಂದು ಟ್ಯಾಕ್ಸಿ ಡ್ರೈವರನನ್ನು ಕೇಳಿದಾಗ ಮಂಕ ಮುಗುಳುನಗೆ ನಕ್ಕ.

“ ಯಾಕಲೇ ನಗ್ತೀಯಾ ”–ಎಂದು ಮಡೆಯ.

“ ಮಡೆಯ ಮಹನೀಯಾ–ನಮಗೆ ಸ್ವತಂತ್ರ ಬಂದ ಹೊಸದರಲ್ಲಿ ವಿಶಿಷ್ಟವೂ ಭಾರತಮಾತ–ಗಾಂಧೀಜೀ ಹೆಸರಿನಲ್ಲಿ ಮೆರೆಯಲಿಲ್ಲವೆ ? ‘ ಭಾರತಮಾತಾ ಫ್ಲೋರ್ ಮಿಲ್ಸ್-ಭಾರತಮಾತ ಷೇವಿಂಗ್ ಸೆಲೂನ್-ಗಾಂಧೀಜಿ ಚಲುವಾದೆರಂಗಡಿ-ಸುಚಿ-ರುಚಿ-ಮಹಾತ್ಮಾ ಮಿಲಿಟರಿ ಹೋಟಲು ’ ಅಂತ ಎಲ್ಲೆಲ್ಲೂ ಬೋರ್ಡುಗಳು ತಗುಲಿ ಕೊಳ್ಳಲಿಲ್ಲವೇ ?–ಹಾಗೆ ಈ ಮಹತಾಯಿ ವಿಕ್ಟೋರಿಯಾರಾಣಿ ಈ ದೇಶದ ಸಿಂಹಾಸನ ಹತ್ತಿದಾಗ ಈ ವಿಶಿಷ್ಟ ಓಣಿ ಕೇರಿ ಪಾರ್ಕುಗಳೂ ವಿಕ್ಟೋರಿಯಾಮಯವಾಗಿರ ಬೇಕಲ್ಲವೆ ? ಅದಕ್ಕೇ ನಕ್ಕದ್ದು....”

“ ಗುರುಗಳೇ ಹಾಗಾದರೆ ಈ ಲಂಡನ್ನಿನಲ್ಲಿಯೂ ಒಂದು ವಿಕ್ಟೋರಿಯಾ ಆಸ್ಪತ್ರೆ ಇರಬೇಕು–ಅದರ ಗತಿಯೂ ನಮ್ಮೂರಿನ ಆಸ್ಪತ್ರೆ ಗತಿಯೇ ಆಗಿದೆ ಎಂದು ವಿಚಾರ ಮಾಡೋಣವೆ ? ”

‘ ನಿನ್ನ ತಲೆ ನಮ್ಮದನ್ನ ನಾವು ಹೊಗಳಲೇಬೇಕು–ಇಲ್ಲಿನ ಆಸ್ಪತ್ರಿಯಲ್ಲಿ ಇದೇ ಸೊಗಸೆಂದು ಮುಲಾಮು ಸವರಿಸಿಕೊ–ಅಲ್ಲಿ–ನಮ್ಮಲ್ಲಿ ಹೋದಾಗ ಅದೇ ಚಲೋದು ಎಂದು ಅವರು ಒರೆ ಇಕ್ಕಿದರೂ ಲಬೋ ಲಬೋ ಮಾಡದೆ ನಗಬೇಕು-ಮುಖ್ಯ ನಮ್ಮ ಕೆಲಸ ಆಗಬೇಕು ತಮಾ ಅದು ಜಾಣರ ಮಾರ್ಗ ”

“ ಹೌದು ಅದು ಜಾಣರ ಮಾರ್ಗ–ಆದರೇ ನಾವು ಜಾಣರೇ ? ”

“ ನೋಟೀಸ್ ” ಎಂದು ಗುರುಗಳು ವಿಧಾನ ಸಭೆಯಲ್ಲಿ ಹೇಳುವಂತೆ ಹೇಳಿ ಬಿಟ್ಟರು.

ಧೂಳಿಲ್ಲದ ರಸ್ತೆ-ಹಸು-ಎಮ್ಮೆ-ನಾಯಿಗಳು ಇಲ್ಲದ ರಸ್ತೆ-ಫೂಟ್ ಪಾತಿನಲ್ಲಿಯೇ ನಡೆವಮಂದಿ ಹಸಿರು ಹಸಿರು ಎಲ್ಲಿ ನೋಡಿದರೂ ಹಸಿರು ಗಿಡಗಳು-ಹಳೇಹೊಸದರ

ಮಧುರ ಮಿಶ್ರದಂತಹ ಮನೆಗಳು-ಕಾರು ಲಾರಿ-ಕೋಚು-ಗಳು ಗಂಭೀರವಾಗಿ ಸಾಗಿದ ರಸ್ತೆಗಳನ್ನು ದಾಟಿ ಗುರುಗಳು ಶಿಷ್ಯರ ಸಮೇತ ರಸೆಲ್ ಸ್ಕ್ವಯರ್ ಬಳಿಯ ನಾಷಿನಲ್ ಹೋಟೇಲ್ ಎಂಬ ಭವ್ಯವಾದ ಹಲವು ಅಂತಸ್ತಿನ ದೊಡ್ಡ ಕಟ್ಟಡದ ಮುಂದೆ ಬಂದು ನಿಂತಿತು ಗಾಂಪ ಪರಿವಾರ.

ಟ್ಯಾಕ್ಸಿಯಿಂದ ಸಾಮಾನು ಇಳಿಸಿದ ಡ್ರೈವರ-ಸಲಾಮು ಹೊಡೆದು ಹದಿಮೂರು ಹತ್ತು ಷಿಲಿಂಗುಗಳನ್ನ ವಸೂಲು ಮಾಡಿ ಮೇಲೆಯೂ ಕೊಂಚ ಪುಡಿ ಕಾಸು ಕೊಡಲಿಲ್ಲವೆಂದು ದುಃಖವಿದ್ದರೂ ಮೇಲೆ ಮೇಲೆ ಥ್ಯಾಂಕ್ಸ್ ಹೇಳಿ ಹೊರಟು ಹೋದ.

ನ್ಯಾಷಿನಲ್ ಹೋಟಲಿನ ಮುಂಬಾಗಿಲು ಇಕ್ಕಿತ್ತು. ಭಾರಿ ಗಾಜಿನ ಬಾಗಿಲು ಮೆಲುಗಡೆಯೇ ಒಂದು ಒತ್ತುಗುಂಡಿ ಇತ್ತು. ಸ್ವಯಂ ಗುರುಗಳೇ ಗುಂಡಿ ಒತ್ತಿದರು. ಕ್ಷಣದಲ್ಲೇ ಸಮವಸ್ತ್ರಧಾರಿಯಾದವನೊಬ್ಬ ಪ್ರತ್ಯಕ್ಷನಾದ ಬಾಗಿಲು ತೆಗೆದು "ಸ್ವಾಗತಂ" ಎನ್ನುವಂತೆ ಕೈಬೀಸಿ ಕರೆದೊಯ್ದ. ಅವನ ಮುಖದಲ್ಲಿ ಗಾಂಭೀರ್ಯ ಬಹಳ ಮೆತ್ತಿಕೊಂಡಿತ್ತು. ಮೂಗು ಮಿರಿ ಮಿರಿ ಮಿಂಚುತಿತ್ತು. ಒಂದುಕ್ಷಣ ಅವನಿಗೇ ಎಂದು ಸಲಾಂ ಹೊಡೆಯೋಣವೇ ಎಂದೆನಿಸಿತು ಅವನ ದಿರಿಸು ವರಸೆ ಠೀವಿ ಲಕ್ಷಣ ನಡಿಗೆ ನೋಡಿ.

ಶಿಷ್ಯರೆಲ್ಲಾ ಗುರುಗಳನ್ನು ಹಿಂಬಾಲಿಸಿದರು. ಆಗಲೇ ಕತ್ತಲು ಕೊಂಚ ಕೊಂಚ ಪಸರಿಸುತ್ತಿತ್ತು. ಇಂಗ್ಲೆಂಡಿನಲ್ಲಿ ಜೂನ್-ಜುಲೈ ತಿಂಗಳಲ್ಲಿ ರಾತ್ರಿ ಒಂಭತ್ತು ಗಂಟೆಯಾದರೂ ಸಂಜೆ ಆರರ ಬೆಳಕೇ ಇರುತ್ತದೆ.

"ಗುರುಗಳೇ ಈ ಊರೊಳಗೆ ರಾತ್ರಿ ಹತ್ತು ಘಂಟೆ ಆದರೂ ಇನ್ನೂ ಸಂಜೆ ಆರು ಘಂಟೆಯೇ ಆಗಿರಲು ಕಾರಣವೇನು?" ಎಂದ ಮಂಕ "ಷಟ್‌ಲಿಪ್" ಎಂದು ಮಾತ್ರ ಗುರುಗಳೆಂದರು ಏಕೆಂದರೆ ಅವರಿಗೂ ಅದು ಏಕೆ ಹೇಗೆ ಎಂದು ಗೊತ್ತಿರಲಿಲ್ಲ.

ಹೋ! ಎಂತಹ ಸುಂದರಿ ಈಕೆ!! ಗಗನಸಖಿ ಹಾಗೇ ಇದ್ದಳು ಆ ಹೋಟಲ ರಿಸೆಪ್ಷನಿಗಿತ್ತಿ Are your rooms reserved here? Can I help you" ಎಂದು ಆಕೆ ಈ *ಗಾಂಪರ* ಗುಂಪನ್ನು ವಿಚಾರಿಸಿದಳು.

ಮಂಕ ಠೀವಿಯಿಂದ ತನ್ನ ಚೀಲದಿಂದ ಒಂದು ಪತ್ರ ಕೊಟ್ಟ. ಆಕೆ ಮುಖದಲ್ಲಿ ಕೊಂಚವೂ ಭಾವ ತೋರಿಸದೆ.

" ನೀವು ಇಂಟರ್‌ನ್ಯಾಷಿನಲ್ ಹೋಟಲಿಗೆ ಹೋಗಬೇಕು ಇದು ನ್ಯಾಷಿನಲ್ ಹೋಟ್ಲು " ಎಂದಳು.

" ಆದೆಲ್ಲಿದೆಯಮ್ಮಾ ತಾಯೀ "

" ಅದು ನ್ಯೂ ರಸೆಲ್ ಸ್ಕ್ವಯರ್ ಹತ್ತಿರ ಹತ್ತೇನ್ಮೈಲಿ. ಇಲ್ಲಿಗೆ-ಸಾರಿ-ವೆರಿಸಾರಿ " ಎಂದುಬಿಟ್ಟಳು. ಆಗಲೇ ಛಳಿಯಾಗುತಿತ್ತು-ಬೇರೆ ದಾರಿ ಕಾಣದೆ ಮತ್ತೆ ಹೋಟಲಿನ ಅಂಗಳಕ್ಕೆ ಬಂದು ತಂಡಿಗೆ ತಲೆ ಒಡ್ಡಿ ಟ್ಯಾಕ್ಸಿಗೆ ಕಾದು ನಿಂತರು International Hotel ಗೆ ಹೋಗಲಿಕ್ಕೆ. ಶ್ರೀರಾಮರಕ್ಷೆ ಎಂದರು ಗಾಂಪರೂಡೆಯರು. ಎಲ್ಲರಿಗೂ ಹೊಟ್ಟೆ ಹಸಿದಿತ್ತು. ತಾಳ ಹಾಕುತ್ತಾ ನಿಂತರು.

—ದಾಶರಥಿ ದೀಕ್ಷಿತ್.




ಮಾರ್ಚಿ 3ರಿಂದ ಅಮೋಘ ಪ್ರಾರಂಭ

ಬೆಂಗಳೂರು : ಮೆಜೆಸ್ಟಿಕ್—ಮಿನರ್ವ—ಅಶೋಕ ಟಾಕೀಸ್
(ಸಿವಿಲ್ ಏರಿಯಾ)

ಮೈಸೂರು :	ದಾವಣಗೆರೆ :	ಶಿವಮೊಗ್ಗ :
ರಾಜಕಮಲ್	**ಶಾಂತಿ ಪಿಕ್ಚರ್ ಹೌಸ್**	**ವಿನಾಯಕ**
ತುಮಕೂರು :	ಚಿತ್ರದುರ್ಗ :	ಹಾಸನ :
ಶ್ರೀ	**ರೂಪವಾಣಿ**	**ಪಿಕ್ಚರ್ ಪ್ಯಾಲೇಸ್**

ಮತ್ತು ಮಂಗಳೂರು ಜ್ಯೋತಿ ಚಿತ್ರಮಂದಿರಗಳಲ್ಲಿ



ಪದ್ಮಿನಿ ಪಿಕ್ಚರ್ಸ್‌ರವರ

ಕಿತ್ತೂರು ಚೆನ್ನಮ್ಮ

(ಕನ್ನಡ)

ತಾರಾಗಣ :

ಬಿ. ಸರೋಜಾದೇವಿ ● ರಾಜಕುಮಾರ್ ● ಎಂ. ವಿ. ರಾಜಮ್ಮ
ಲೀಲಾವತಿ ● ಲೀಲಾ ಚಿಂದೋಡಿ ● ರಮಾದೇವಿ
ಡಿಕ್ಕಿ ಮಾಧವರಾವ್ ● ನರಸಿಂಹರಾಜು ● ಬಾಲಕೃಷ್ಣ
ಬಿ. ಹನುಮಂತಾಚಾರ್ ● ಹೆಚ್. ಟಿ. ಅರಸ್ ● ಈಶ್ವರಪ್ಪ
ಕೆ. ಎಸ್. ಅಶ್ವಥ್ ● ರಾಜಾಶಂಕರ್ ● ವೀರಪ್ಪ ಚಿಂದೋಡಿ
ಶ್ರೀಧರರಾವ್ B A. B com., ● ಶ್ರೀಕಾಂತ್ ● ರಾಜಶೇಖರ್
ಶ್ಯಾಮಸುಂದರ್ ● ಸೂರ್ಯಕುಮಾರ್ ● ಸೇತುಪತಿ
ವಸಂತ್ ಸಾ ● ಮುಂತಾದವರು.

ಚಿತ್ರನಾಟಕ ಸಂಭಾಷಣೆ ಹಾಡುಗಳು :	ಸಂಗೀತ :
ಜಿ. ವಿ. ಅಯ್ಯರ್	**ಟಿ. ಜಿ. ಲಿಂಗಪ್ಪ**

ನಿರ್ಮಾಪಕ-ನಿರ್ದೇಶಕ : ಬಿ. ಆರ್. ಪಂತುಲು

—a Padmini Pictures Release


ಒಮ್ಮೆ ಉಪಯೋಗಿಸಿ ನೋಡಿ—
ಎಷ್ಟು ಸುಂದರ ಉಜ್ವಲ ಪೇಯಿಂಟು !
ಷಾಲಿಮಾರ್ ಸೂಪರ್‌ಲ್ಯಾಕ್ ಸಿಂಥೆಟಿಕ್ ಎನಾಮೆಲ್ — ಇದೊಂದು ಶೀಘ್ರದಲ್ಲಿ ಗಟ್ಟಿಯಾಗಿ ಒಣಗುವ, ಬಹಳವಾಗಿ ಥಳಥಳಿಸುವ, ನಿಶ್ಚಿತ ಬಾಳಿಕೆಯಿರುವ, ಒಳಭಾಗಕ್ಕೂ ಅಥವಾ ಹೊರಭಾಗಕ್ಕೂ ಉಪಯೋಗಿಸಬಹುದಾದ ಪೇಯಿಂಟಾಗಿದೆ. ಇದನ್ನು ಮನೆಯಲ್ಲಿಯು ಮತ್ತು ಕಾರ್ಖಾನೆಯಲ್ಲಿಯ ಎಲ್ಲಾ ತೆರನಾದ ಭಾಗಗಳ ಮೇಲೆ ಬ್ರಶ್ಶಿನಿಂದ ಬಳಿಯಬಹುದು, ಸ್ಪ್ರೇ ಮಾಡಬಹುದು ಅಥವಾ "ಡಿಪ್" ಮಾಡಿ ಹಚ್ಚಬಹುದು
38 ಬಣ್ಣಗಳು—ಒಂದರೊಂದಿಗೆ ಮತ್ತೊಂದನ್ನು ಕಲಸಬಹುದು. 1 ಪೈಂಟ್ ಮತ್ತು 1 ಗ್ಯಾಲನಿನ ಟನ್ನುಗಳಲ್ಲಿ ಹಾಗೂ 5 ಗ್ಯಾಲನಿನ ಡ್ರಮ್ಮುಗಳಲ್ಲಿ ದೊರೆಯುತ್ತೆ
ಷಾಲಿಮಾರ್
ಸೂಪರ್‌ಲ್ಯಾಕ್
ಸಿಂಥೆಟಿಕ್ ಎನಾಮೆಲ್
JFN. 8 KN
SHALIMAR PAINT, COLOUR & VARNISH CO., PRIVATE LTD.
Calcutta - Bombay - Madras - New Delhi - Kanpur
SHALIMAR PAINT

Statement about ownership and other particulars about newspaper **KORAVANJI** to be published in the first issue every year after last day of February.

FORM IV

(SEE RULE 8)

1. Place of Publication ... ... BANGALORE
2. Periodicity of its publication .. .. MONTHLY
3. Printer's Name . . ... SRI. B. SREENIVASA IYENGAR
   Nationality . ... HINDU
   Address ... ... COTTONPET, BANGALORE.
4. Publisher's Name ... . . SRI. B. N GUPTA
   Nationality ... ... HINDU
   Address ... ... C/o KORAVANJI, BANGALORE 9.
5. Editor's Name ... ... M. SIVARAM
   Nationality ... ... HINDU
   Address... ... • PROPRIETOR, KORAVANJI, BANGALORE-9
6. Names and addresses of individuals who own the newspapers and partners or shareholders holding more than one per cent of the total capital. } M. SIVARAM
Sole Proprietor
KORAVANJI
BANGALORE-9

I, **M. SIVARAM,** hereby declare that the particulars given above are true to the best of my knowledge and belief.

M. SIVARAM

Date 28–2–61 *For Signature of Publisher*

Printed by B. S. Iyengar Bangalore City
Publisher—B. N Gupta Editor—M. S…